International Journal of Kannada Research
www.kannadajournal.com

ISSN: 2454–5813
IJKR 2020; 6(3): 38-46
© 2020 IJKR
www.kannadajournal.com
Received: 28-05-2020
Accepted: 30-06-2020

**ನಿಯಾಝ್. ಪಿ**
ಸಹಾಯಕ ಪ್ರಾಧ್ಯಾಪಕರು
ಯಾಸಿಮ್, ಬಲ್ಮಠ
ಯೇನೇಪೋಯ ಡೀಮ್ ಟು ಬಿ
ವಿಶ್ವವಿದ್ಯಾನಿಲಯ
ಮಂಗಳೂರು.

**Corresponding Author:**
**ನಿಯಾಝ್. ಪಿ**
ಸಹಾಯಕ ಪ್ರಾಧ್ಯಾಪಕರು
ಯಾಸಿಮ್, ಬಲ್ಮಠ
ಯೇನೇಪೋಯ ಡೀಮ್ ಟು ಬಿ
ವಿಶ್ವವಿದ್ಯಾನಿಲಯ
ಮಂಗಳೂರು.

# ಸೂಫಿ ಪಂಥ

**ನಿಯಾಝ್. ಪಿ**

ಕನ್ನಡ ಸಾಹಿತ್ಯವು ಪ್ರಾಚೀನ ಇತಿಹಾಸವನ್ನು ಹಾಗೂ ಪರಂಪರೆಯನ್ನು ಹೊಂದಿದ್ದು ಅತ್ಯಂತ ಶ್ರೀಮಂತವಾದ ಸಾಹಿತ್ಯವಾಗಿದೆ. ಕನ್ನಡ ಸಾಹಿತ್ಯಕ್ಕೆ ಭದ್ರವಾದ ಬುನಾದಿಯನ್ನು ದೊರಕಿಸಿಕೊಡುವಲ್ಲಿ ಅನೇಕ ಸಾಹಿತಿಗಳು, ಕವಿಗಳು, ಲೇಖಕರು, ವಚನಕಾರರು, ಕೀರ್ತನೆಕಾರರು, ಶರಣರು, ಸಂತರು ನಿರಂತರವಾಗಿ ಶ್ರಮಿಸಿದ್ದಾರೆ. ಅವರೆಲ್ಲರ ಶ್ರಮದ ಫಲವಾಗಿ ನಮ್ಮ ಕನ್ನಡ ಸಾಹಿತ್ಯವು ಹೆಮ್ಮರವಾಗಿ ಬೆಳೆದಿದೆ ಎಂದು ಹೇಳಬಹುದು. ಹೀಗೆ ಸಾಹಿತ್ಯಕ್ಕಾಗಿ ಶ್ರಮಿಸಿದವರಲ್ಲಿ ಸೂಫಿ ಸಂತರೂ ಪ್ರಮುಖರಾಗಿದ್ದಾರೆ.

ಸೂಫಿ ಪಂಥ ಇಸ್ಲಾಂ ಧರ್ಮದ ಒಂದು ತತ್ತ್ವವಾಗಿದೆ. ಇದಕ್ಕೆ ಸುಮಾರು ಸಾವಿರಾರು ವರ್ಷಗಳ ಇತಿಹಾಸವಿದೆ ಎಂದು ಹೇಳಬಹುದು. ಅರಬ್ಬೀ ಭಾಷೆಯಲ್ಲಿ ಉಣ್ಣೆಗೆ ಸೂಫ್ ಎಂದು ಹೆಸರು. ಈ ಪಂಥದವರು ಉಣ್ಣೆ ವಸ್ತ್ರ ಧರಿಸುತ್ತಿದ್ದುದರಿಂದ ಇವರಿಗೆ ಸೂಫಿಗಳು ಎಂದು ಹೆಸರು ಬರಲು ಕಾರಣವಾಯಿತು ಎನ್ನಲಾಗುತ್ತಿದೆ. ಮುಂದೆ ಇವರು ಸೂಫಿ ಪಂಥದ ಉಗಮಕ್ಕೆ ಕಾರಣರಾದರು ಎಂದೆನ್ನಬಹುದು.

ಮಹಮ್ಮದ್ ಪೈಗಂಬರ್ ಮೆಕ್ಕಾದಿಂದ ಮದೀನಕ್ಕೆ ಹೋಗುವ ಮೊದಲೇ ಇದ್ದಂತಹ ತತ್ತ್ವಜ್ಞಾನಿಗಳಾದ ಹಲವಾರು ಮುಸ್ಲಿಮರು ಈ ಸಿದ್ಧಾಂತವನ್ನು ಬೆಳೆಸುತ್ತಾ ಬಂದರು ಎಂದು ಹೇಳಲಾಗುತ್ತಿದೆ. ಈ ಗುಂಪಿನಲ್ಲಿ ಪುರುಷರು ಮಾತ್ರವಲ್ಲದೆ ಮಹಿಳೆಯರೂ ಇದ್ದರೆಂದು ತಿಳಿದುಬರುತ್ತದೆ. ವಿಶ್ವದಾದ್ಯಂತವಾಗಿ ಮಹಿಳಾ ಸೂಫಿಗಳು ರಾಬಿಯಾ ಅಲ್ ಅದಮಿಯಾ, ಹಬಾ ಖಾತೂನ್, ಬೀಬೀ ನಫೀಸಾ, ಮೌಲಾನಾ ರೋಮಿಯಾ, ಹಜ್ಜಾಜಾಕಿಯ್ಯ, ಬೀಬಿ ಫಾತಿಮಾ ಸಾಮ್, ಬೀಬಿ ಜುಲಾಖಾ,ಮಾಹಿಸಾಹಿಬಾ, ಜಹನಾರಾಬೇಗಂ, ಸಂತ ಹಜರತ್ ಬಾಬಾಜಾನ್ ಮೊದಲಾದವರು ಸೂಫಿ ಪಂಥದ ಬೆಳವಣಿಗೆಗೆ ಸಹಕರಿಸಿದ್ದಾರೆ. ಮಹಿಳೆಯರಲ್ಲಿ ಮುಖ್ಯವಾಗಿ ಬಿಯಾ ಎಂಬ ಮಹಿಳೆ ಸೂಫಿ ಸಿದ್ಧಾಂತದ ಬಗ್ಗೆ ನಿಷ್ಠಾವಂತಳಾಗಿದ್ದಳೆಂದು ತಿಳಿದುಬರುತ್ತದೆ. ಸೂಫಿ ಪಂಥದವರು ಇವಳನ್ನು ಇಂದಿಗೂ ಪೂಜ್ಯಭಾವನೆಯಿಂದ ಕಾಣುತ್ತಿದ್ದಾರೆ. ಅತ್ತರ್ ಎಂಬ ಕವಿ ಈಕೆಯನ್ನು ಕುರಿತು ಪ್ರಶಂಸನೀಯ ಮಾತುಗಳನ್ನಾಡಿದ್ದಾನೆಂದೂ ಈಕೆಯ ದೈವಿಕ ಭಾವನೆಯ ಉದ್ಗಾರಗಳನ್ನು ಬರೆದಿಟ್ಟಿದ್ದಾನೆಂದೂ ತಿಳಿದುಬರುತ್ತದೆ. ಇದರ ಮೂಲಕ ಬಿಯಾಳ ಪ್ರಸಿದ್ಧತೆಯನ್ನು ನಾವು ತಿಳಿದುಕೊಳ್ಳಬಹುದು. ಪರಮಾತ್ಮನ ಕಡೆಗೆ ಮುಖ ಹೊರಳಿಸುವುದೇ ಜಾಣತನದ ಫಲ ಎಂದು ಈಕೆ ಹೇಳಿರುವುದು ಸೂಫಿ ಸಿದ್ಧಾಂತದ ಪ್ರತಿಪಾದನೆಯಲ್ಲಿ ಸಾಹಸ ಮತ್ತು ಶ್ರದ್ಧೆಯ ಪ್ರಯತ್ನವೆಂದು ಹೇಳಬಹುದು. ಕ್ರಿ.ಶ ಸುಮಾರು 11ನೆಯ ಶತಮಾನದಿಂದ 18ನೆಯ ಶತಮಾನದವರೆಗಿನ ಹಲವಾರು ಸೂಫಿ ಸಂತರುಗಳು ಭಾರತದ ವಿವಿಧ ಸ್ಥಳಗಳಾದ ದೆಹಲಿ, ಲಾಹೋರ್, ಮುಲ್ತಾನ್, ದೌಲತಾಬಾದ್, ಕಲಬುರ್ಗಿ, ಬೀದರ್, ವಿಜಯಪುರ, ಮಂಗಳೂರು ಇತ್ಯಾದಿ ಕಡೆಗಳಲ್ಲಿ ನೆಲೆಸಿದ್ದರು. ಹೀಗೆ ಸ್ತ್ರೀಪುರುಷರಿಬ್ಬರೂ ಸೂಫಿ ಪಂಥದ ಪ್ರಚಾರದಲ್ಲಿ ಕೈ ಜೋಡಿಸಿದ್ದರು ಎಂದು ತಿಳಿದುಬರುತ್ತದೆ. ಇದರಿಂದ ಸೂಫಿ ಪಂಥವು ಯಾವುದೇ ಒಂದು ವರ್ಗಕ್ಕೆ ಮಾತ್ರ ಸೀಮಿತವಾಗಿರಲಿಲ್ಲ ಎಂದು ಹೇಳಬಹುದು.

ಈ ಪಂಥವನ್ನು ಮುಸ್ಲಿಮರು ತಸ್ವವಫ್ ಎಂದು ಕರೆಯುವರು. ಬಾಗ್ದಾದಿನ ಅಲ್–ಜುನ್ಯೆದ್ ಮತ್ತು ಬಿಸ್ತಾಂ ಪಟ್ಟಣದ ಅಲ್–ಬಾಯಜಿದ್ ಆ ಕಾಲಕ್ಕೆ ಇದರ ಪ್ರಚಾರದಲ್ಲಿ ಅತ್ಯಂತ ಪ್ರಭಾವಶಾಲಿ ಪರಿಣಾಮವನ್ನುಂಟುಮಾಡಿದ ವ್ಯಕ್ತಿಗಳಲ್ಲಿ ಮುಖ್ಯವಾದವರೆನ್ನಬಹುದು. ಇವರು 9ನೆಯ ಶತಮಾನದ ಕೊನೆಯ ಬಾಗದಲ್ಲಿ ಜೀವಿಸಿದ್ದರೆಂದು ತಿಳಿದುಬರುತ್ತದೆ. ಕವಿಗಳೂ ಕೂಡ ಸೂಫಿ ಪಂಥದ ಪ್ರಚಾರ ಕಾರ್ಯದಲ್ಲಿ ತೊಡಗಿದ್ದರೆಂದು ತಿಳಿದುಬರುತ್ತದೆ. ಇವರಲ್ಲಿ ಅಬು ಸಯೀದ್ ಅಗ್ರಗಣ್ಯನಾದವನು. ಇವನಿಗೆ ಹಲವಾರು ಶಿಷ್ಯರಿದ್ದು ಇವರೆಲ್ಲರೂ ಉಣ್ಣೆಯ ವಸ್ತ್ರಗಳನ್ನು ಧರಿಸುತ್ತಿದ್ದರೆಂದು ತಿಳಿದುಬಂದಿದೆ.

ಸೂಫಿಗಳನ್ನು ವಿವಿಧ ಕಾರಣಗಳಿಂದಾಗಿ ಮತಾನುಯಾಯಿಗಳು ಅನಾದರಣೆಯಿಂದ ನೋಡುತ್ತಿದ್ದು, ಧರ್ಮಭ್ರಷ್ಟರೆಂದು ಕರೆಯುತ್ತದ್ದರೆನ್ನಲಾಗಿದೆ. ಸೂಫಿ ಪಂಥದ ಅಲ್–ಜುನೈದ್‌ನ ಪ್ರಖ್ಯಾತ ಶಿಷ್ಯ ಹುಸೇನ್ ಇಬೆನ್ ಮನ್ಸೂರ್‌ನಿಗೆ ಹಲ್ಲಾಜ್ ಎಂಬ ಹೆಸರಿತ್ತೆಂದು ಹೇಳಲಾಗಿದೆ. ಹಲ್ಲಾಜ್ ಎಂದರೆ ಉಣ್ಣೆ ಹೆಕ್ಕುವವ ಎಂದು ಅರ್ಥ. ಈತ ತನ್ನ ಪ್ರಚಾರ ಕಾರ್ಯದಿಂದ ಮತೀಯರ ಕೋಪತಾಪಕ್ಕೆ ಗುರಿಯಾಗಿ 923ರಲ್ಲಿ ಕೊಲೆಯಾಗಿ ಸೂಫಿ ತತ್ತ್ವಕ್ಕೋಸ್ಕರ ಬಲಿಯಾಗಿ ಹುತಾತ್ಮನಾದನೆಂದು ತಿಳಿದುಬರುತ್ತದೆ. ಸೂಫಿ ಸಂತರು ಇಂದಿಗೂ ಇವನನ್ನು ಪೂಜ್ಯತೆಯಿಂದ ಕಾಣುವರು.

ಸೂಫಿಗಳು ಧಾರ್ಮಿಕ ಸಂತರಾಗಿದ್ದು ಅದಕ್ಕಿಂತಲೂ ಮಿಗಿಲಾಗಿ ಅಖಂಡ ಮಾನವ ಸಮುದಾಯದ ಹಿತಾಶಕ್ತಿಗಳ ಬಗ್ಗೆ, ಬದುಕಿನ ಬಗ್ಗೆ, ಧರ್ಮದ ಗಡಿಗಳನ್ನು ದಾಟಿ ಚಿಂತಿಸಿದ್ದರೆಂದು ತಿಳಿದುಬರುತ್ತದೆ. ಈ ಕಾರಣಕ್ಕಾಗಿ ಲೋಕಸಂಚಾರವನ್ನು ಮಾಡಿ ತಾವು ಕಂಡ ಜ್ಞಾನವನ್ನು ಸರಳವಾಗಿ ಪ್ರಸಾರ ಮಾಡಿದ ಸೂಫಿಗಳು ವಿಶ್ವ ಧರ್ಮಿಗಳಾಗಿದ್ದಾರೆ. ಒಂದು ಕಾಲದಲ್ಲಿ ಬೌದ್ಧಿಕವಾಗಿ ಎಲ್ಲೆಡೆಯಲ್ಲಿ ಅಲೆದಾಡಿದ ಸೂಫಿಗಳು ಇಂದು ಸಂಸ್ಕೃತಿ ಪ್ರಿಯರು, ಮಾನವ ಕಲ್ಯಾಣಾಕಾಂಕ್ಷಿಗಳ ಚಿರಂತನ, ಸತ್ಯ ಶೋಧಕರ ಹೃದಯಗಳಲ್ಲಿ ಜೀವಸಂಚಾರವನ್ನುಂಟುಮಾಡುತ್ತಿರುವ ಆತ್ಮಸಾಕ್ಷಿಯ ಪ್ರತೀಕವಾಗಿದ್ದಾರೆ. ಹೀಗೆ ಸೂಫಿಗಳು ಮಾನವ ಕುಲದ ಕಲ್ಯಾಣಕ್ಕಾಗಿ ಸದಾ ಚಿಂತಿಸುತ್ತಿದ್ದರೆಂದು ಹೇಳಬಹುದು.

ಸೂಫಿ ಪಂಥದಲ್ಲಿ ಆಧ್ಯಾತ್ಮಕ್ಕೆ ಪ್ರಮುಖ ಸ್ಥಾನವನ್ನು ನೀಡಲಾಗಿತ್ತು. ನೊಂದ ಜನರಿಗೆ ಸಾಂತ್ವಾನ ನೀಡುವ ಮೂಲಕ, ದೈವತ್ವದ ಜನರ ಸಂಬಂಧ, ಪ್ರೀತಿಯಿಂದ, ನಂಬಿಕೆಯಿಂದ ಏನನ್ನಾದರೂ ಸಾಧಿಸಬಹುದು ಎಂಬುದನ್ನು ಸೂಫಿ ಪಂಥವು ತೋರಿಸಿಕೊಟ್ಟಿದೆ ಎನ್ನಬಹುದು. ಇಸ್ಲಾಂ ಧರ್ಮವು ಹುಟ್ಟಿದ ಸ್ವಲ್ಪ ಕಾಲದಲ್ಲಿಯೇ ಹುಟ್ಟಿಕೊಂಡ ಈ ಸೂಫಿ ಪಂಥ ಮುಖ್ಯವಾಗಿ ಎಲ್ಲವನ್ನು ತ್ಯಜಿಸಿ ದೇಹ ದಂಡನೆಯ ಮೂಲಕ ಪರಮಾತ್ಮನನ್ನು ಆರಾಧಿಸುವುದು ಸೂಫಿ ಪಂಥದ ತತ್ತ್ವವಾಗಿದೆ. ಅರಬ್ ದೇಶಗಳಲ್ಲಿ ಹುಟ್ಟಿಕೊಂಡ ಈ ಪಂಥವು ತನ್ನ ನಿರ್ದಿಷ್ಟ ಧೋರಣೆಗಳಿಂದ, ಸಾರಕತ್ವ, ಪವಾಡ ಮತ್ತು ಸಿದ್ದತ್ವದಿಂದ ಜನರನ್ನು ಆಕರ್ಷಿಸುತ್ತ ಇಸ್ಲಾಂ ತತ್ತ್ವವನ್ನು ಸಾರುತ್ತಿತ್ತು. ಆದರೆ ರಾಜಾಶ್ರಯದಿಂದ ಕೂಡಿದ ಸೂಫಿಸಂ ಮುಂದಿನ ದಿನಗಳಲ್ಲಿ ಇಸ್ಲಾಂ ತತ್ತ್ವಗಳನ್ನು ಜೊತೆಗೂಡಿಸಿಕೊಂಡು ಪ್ರಭುತ್ವ ಜನವಿರೋಧಿಯಾದಾಗ ಸೂಫಿಸಂ ವಿರೋಧ ವ್ಯಕ್ತಪಡಿಸಿ, ಸೂಫಿಗಳು ದೇಶದ ಬೇರೆ ಬೇರೆ ಕಡೆಗಳಲ್ಲಿ ನೆಲೆಸಲು ಪ್ರಯತ್ನಿಸಿದ್ದಾರೆ. ಇದರಿಂದ ಸೂಫಿಗಳು ಭಾರತಕ್ಕೆ ಪ್ರವೇಶಗೊಂಡಿದ್ದಾರೆ ಎಂದು ಹೇಳಬಹುದು.

ಭಾರತದಲ್ಲಿ ಸೂಫಿಸಂಗೆ ಉತ್ತಮ ಇತಿಹಾಸವುಂಟು. ಸೂಫಿಗಳು ಮೊದಲು ನೆಲದಾರಿಯ ಮೂಲಕ ಭಾರತಕ್ಕೆ ಬರತೊಡಗಿದ್ದು 11–12ನೆಯ ಶತಮಾನದಿಂದ ಎಂದು ತಿಳಿದುಬರುತ್ತದೆ. ಏಕೆಂದರೆ ಅಫಘಾನಿಸ್ಥಾನದ ಪರ್ಷಿಯಾಗಳ ರಾಜರುಗಳಿಂದ ಆಳುವ ವರ್ಗಗಳು ಭಾರತದ ಭೂಭಾಗಗಳನ್ನು ಜಯಿಸಿ ರಾಜ್ಯಸ್ಥಾಪನೆ ಮಾಡುವುದರಲ್ಲಿ ನಿರತರಾಗಿರುವಾಗ ಸೂಫಿಗಳಿಗೆ ವಿರುದ್ಧವಾದ ವಾತಾವರಣ ಸೃಷ್ಟಿಯಾದುದರಿಂದ ಸೂಫಿಗಳು ಭಾರತಕ್ಕೆ ಪ್ರವೇಶಿಸಿರಬಹುದೆಂದು ಹೇಳಬಹುದು. ಸೂಫಿಗಳು ಇಸ್ಲಾಂ ತತ್ತ್ವವನ್ನು ಸಾರುವುದರ ಮೂಲಕ ಬಾರತದ ಬುಡಕಟ್ಟು ಸಮುದಾಯಗಳು ಹಾಗೂ ಆರ್ಥಿಕವಾಗಿ, ಸಾಮಾಜಿಕವಾಗಿ ಹಿಂದುಳಿದ ಜನರು, ಶೋಷಣೆಗೆ ಒಳಗಾದ ಕೆಲವು ಜನಸಮುದಾಯಗಳ ಕಣ್ಣೀರು ಒರೆಸುವ ಕೆಲಸ ನಡೆಸಿತು. ಅವುಗಳಲ್ಲಿ ಪಿಂಜಾರರು, ದರವೇಸು ದಲಿತರು ಆರ್ಥಿಕವಾಗಿ ಹಿಂದುಳಿದವರು, ಫಕೀರರು ಮೊದಲಾದ ಸಮುದಾಯಗಳಾಗಿವೆ. ಸೂಫಿ ತತ್ತ್ವಗಳಾದ ಪ್ರೀತಿ, ಪ್ರೇಮ, ನಂಬಿಕೆ, ವಿಶ್ವಾಸ, ದೇವರಲ್ಲಿ ನಂಬಿಕೆ, ದೇವರ ಪ್ರಾರ್ಥನೆ,. ಸತ್ಯವನ್ನು ನುಡಿಯುವುದು ಮೊದಲಾದವುಗಳಿಗೆ ಬೇಗನೆ ಈ ಸಮುದಾಯಗಳು ಪ್ರಭಾವಕ್ಕೊಳಗಾದವೆಂದು ಹೇಳಬಹುದು. ಜನರು ತಮ್ಮ ಕಷ್ಟಗಳಿಗೆ, ಕಣ್ಣೀರಿಗೆ ಮಿಡಿಯುವ ತತ್ತ್ವಗಳೆಡೆಗೆ ಬಲು ಬೇಗನೆ ಆಕರ್ಷಿತರಾಗುತ್ತಾರೆ ಎಂಬುದನ್ನು ನಾವು ಈ ಮೂಲಕ ತಿಳಿದುಕೊಳ್ಳಬಹುದಾಗಿದೆ.

ಕರ್ನಾಟಕದಲ್ಲಿ ಭಕ್ತಿಪಂಥದ ಪ್ರವರ್ತಕರಾದ ವಚನಕಾರರು ಮತ್ತು ಹರಿದಾಸರಿಗೆ ಕನ್ನಡ ಸಂಸ್ಕೃತಿಯ ಚರಿತ್ರೆಯಲ್ಲಿರುವ ಮಹತ್ತರ ಸ್ಥಾನವನ್ನು ಎಲ್ಲ ವಿದ್ವಾಂಸರು ಗುರುತಿಸಿದ್ದಾರೆ. ಭಕ್ತಿ ಪಂಥ ಅಖಿಲ ಭಾರತ ಹರವುಳ್ಳ ಒಂದು ಸಾಂಸ್ಕೃತಿಕ ಚಳುವಳಿಯಾಗಿದ್ದರೂ, ಕನ್ನಡದ ಭಕ್ತಿಪಂಥ ತನ್ನದೇ ಆದ ಪ್ರಾದೇಶಿಕ ವೈಶಿಷ್ಟ್ಯಗಳನ್ನು ಪಡೆದಿರುತ್ತದೆ. ಆದರೆ ತಮ್ಮ ಸಾಹಿತ್ಯಿಕ ರಚನೆಗಳಲ್ಲಿ ಹಾಗೂ ಪ್ರಾಪಂಚಿಕ ಧೋರಣೆಗಳಲ್ಲಿ ವಚನಕಾರರನ್ನು ಹಾಗೂ ಹರಿದಾಸರನ್ನು ಹೋಲುವವರು ಕರ್ನಾಟಕದ ಸೂಫಿ ಸಂತರು. ಇವರು ಹದಿನಾರನೆಯ ಶತಮಾನದ ಹರಿದಾಸರಿಗೆ ಸಮಕಾಲೀನರಾಗಿದ್ದಾರೆ. ಈ ಸೂಫಿಗಳು ನೆಲೆಸಿದ್ದ ಉತ್ತರ ಕರ್ನಾಟಕದ ಗ್ರಾಮೀಣ ಜನತೆಯ ಮೌಖಿಕ ಪರಂಪರೆಯಲ್ಲಿ ಇವರ ಚರಿತ್ರೆ ಮೂಡಿಬಂದಿದೆ. ಕರ್ನಾಟಕದಲ್ಲಿ ಆಗಿಹೋದ ಸೂಫಿ ಸಂತರ ಸಮಾಧಿಗಳು [ದರ್ಗಾ] ಇಂದಿಗೂ ಜನಪ್ರಿಯ ಯಾತ್ರಾ ಸ್ಥಳಗಳಾಗಿವೆ. ಇಂತಹ ಯಾತ್ರಾ ಸ್ಥಳಗಳನ್ನು ಭಕ್ತಿ ಭಾವನೆಯಿಂದ ಪೂಜಿಸುತ್ತಿರುವುದನ್ನು ನಾವೆಲ್ಲರೂ ಕಾಣಬಹುದಾಗಿದೆ.

ಅಮೇರಿಕಾದ ಇತಿಹಾಸಕಾರರಾದ ರಿಚರ್ಡ್ ಮ್ಯಾಕ್ಸವೆಲ್ ಈಟನ್ ಇವರು ಬಿಜಾಪುರ, ಗುಲಬರ್ಗಾ, ಹೈದರಾಬಾದ್ ಮೊದಲಾದ ಭಾಗಗಳಲ್ಲಿರುವ ಸೂಫಿಗಳ ಸಮಾಧಿಗಳಲ್ಲಿರುವ ಕಾಗದ ಪತ್ರಗಳನ್ನು ಅಭ್ಯಾಸ ಮಾಡಿ, 'ಸೂಫಿ ಆಫ್ ಬಿಜಾಪುರ' ಎಂಬ ಕೃತಿಯನ್ನು ರಚಿಸಿದ್ದಾರೆ. ಇಂಗ್ಲೀಷ್ ಭಾಷೆಯಲ್ಲಿ ಅಮೇರಿಕಾದ ಚರಿತ್ರೆಗಾರರು ಬರೆದ ಈ ಗ್ರಂಥ ಸೂಫಿ ಸಂತರ ಕುರಿತಾದ ಮಹತ್ವಪೂರ್ಣವಾದ ಸಂಗತಿಗಳನ್ನು ಹೊರಚೆಲ್ಲುತ್ತದೆ. ಕರ್ನಾಟಕದ ಮಧ್ಯಯುಗದ ರಾಜಕಾರಣದಲ್ಲಿ ಮತ್ತು ಸಾಮಾಜಿಕ ಬದುಕಿನಲ್ಲಿ ಸೂಫಿ ಸಂತರು ನಿರ್ವಹಿಸಿದ ಪಾತ್ರವನ್ನು ಈಟನ್ ಸ್ಥೂಲವಾಗಿ ವಿವರಿಸಿದ್ದಾರೆ. ಈ ಅಂಶಗಳನ್ನು ಗಮನಿಸಿದಾಗ ಸೂಫಿ ಪಂಥವು ತನ್ನ ವಿಚಾರಧಾರೆಗಳಿಂದ ವಿದೇಶಿಯರ ಗಮನವನ್ನೂ ಸೆಳೆದಿತ್ತು ಎಂದು ನಾವು ಹೇಳಬಹುದು. ಏಕೆಂದರೆ ವಿದೇಶಗಳ ಇತಿಹಾಸಕಾರರೂ ಕೂಡ ಈ ಸೂಫಿ ಪಂಥದ ಕುರಿತಾಗಿ ಅಧ್ಯಯನವನ್ನು ನಡೆಸಿ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ.

ಸೂಫಿಗಳು ತಮ್ಮನ್ನು ಫಕೀರರೆಂದು ಕರೆದುಕೊಳ್ಳುತ್ತಿದ್ದರು. 'ಫಕೀರ' ಎಂದರೆ ತಿರುಪೆ ಎತ್ತಿ ಜೀವನ ಸಾಗಿಸುವ ಭಕ್ತ. ಈ ಶಬ್ದ ಕನ್ನಡಕ್ಕೆ ಬಂದಿರುವುದೇ ಸೂಫಿಗಳಿಂದ ಎಂದು ತಿಳಿದುಬರುತ್ತದೆ. ಸೂಫಿಗಳೆಲ್ಲ ರಾಜಾಶ್ರಯ ಪಡೆದು ಶ್ರೀಮಂತರಾದವರು. ಬಡತನ, ಸರಳತೆ, ಮಿತವ್ಯಯ, ಹೆಚ್ಚು ಆಸೆಗಳು ಇಲ್ಲದಿರುವುದು ಇವೇ ಗುಣಗಳು ಸೂಫಿ ಚಿಂತನೆಯಲ್ಲಿ ಮುಖ್ಯ ಸ್ಥಾನ ಪಡೆದಿರವುದರಿಂದಲೇ ಅವರು ತಮ್ಮನ್ನು ಫಕೀರರೆಂದು ಕರೆದುಕೊಂಡರು. ರಾಜರು ಕೂಡ ಈ ಸೂಫಿ ಸಂತರ ವಿಚಾರಧಾರೆಗಳಿಗೆ ಮಾರುಹೋಗಿ ಅವರಿಗೆ ರಾಜಾಶ್ರಯಗಳೊಂದಿಗೆ ಸಕಲ ಸೌಲಭ್ಯಗಳನ್ನು ನೀಡಿರುವುದನ್ನು ನಾವಿಲ್ಲಿ ಗಮನಿಸಬಹುದಾಗಿದೆ.

ಸೂಫಿ ಸಂತರು ಅದರಲ್ಲಿಯೂ ಮುಖ್ಯವಾಗಿ ಚಿಸ್ತಿ ಪಂಥವರು ಭಾರತದ ಸಂಸ್ಕೃತಿ ಹಾಗೂ ಇತಿಹಾಸದ ಮೇಲೆ ವಿಶೇಷ ಪರಿಣಾಮವನ್ನುಂಟುಮಾಡಿ ಭಾರತದ ಸಾಂಸ್ಕೃತಿಕ ಇತಿಹಾಸದಲ್ಲಿ ದಾಖಲಾಗಿದ್ದಾರೆ. ಅವರಲ್ಲಿ ಪ್ರಮುಖರೆಂದರೆ ಮೊಹಿಯುದ್ದೀನ್,

ದಿಲ್ಲಿಯ ಕುತುಬುದ್ದೀನ್, ಬಖುತ್ಯಾರಕಾಕಿ, ನಿಜಮುದ್ದೀನ್ ಅವುಲಿಯಾ ನಾಸಿರುದ್ದೀನ್ ಚಿರಾಗ್. ಇವರೆಲ್ಲಾ ರಾಜಕೀಯದಿಂದ ದೂರವಿದ್ದು ಅಂದಿನ ರಾಜರು ಇವರನ್ನು ಗೌರವದಿಂದ ಕಾಣುತ್ತಿದ್ದರು. ಉತ್ತರದಂತೆ ದಕ್ಷಿಣದಲ್ಲೂ ಅನೇಕ ಸೂಫಿ ಸಂತರು ಪ್ರಸಿದ್ಧರಾಗಿದ್ದರು. 1321ರಲ್ಲಿ ದಿಲ್ಲಿಯಲ್ಲಿ ಜನಿಸಿದ ಖ್ವಾಜಾ ಬಂದೇ ನವಾಜರು ಮಹಮ್ಮದ್ ತುಘಲಕ್‌ನ ಅಪ್ಪಣೆಯ ಮೇರೆಗೆ, ಬಾಲ್ಯದಲ್ಲಿ ತನ್ನ ತಂದೆಯೊಂದಿಗೆ ದಕ್ಷಿಣದ ದೌಲತಾಬಾದಿಗೆ ಬಂದರು. ತಂದೆಯ ಮರಣಾನಂತರ ಇವರು ತಿರುಗಿ ದಿಲ್ಲಿಗೆ ಹೋದರು. ಅಲ್ಲಿ ಚಿಸ್ತಿ ಸಂತರೊಬ್ಬರು ಇವರಿಗೆ ಗುರುಗಳಾಗಿದ್ದು, ಅವರ ಮಾರ್ಗದರ್ಶನದಲ್ಲಿ ಪ್ರಸಿದ್ಧ ವಿದ್ವಾಂಸರಾದರು. ತೈಮೂರಲೆಂಗನ ದಾಳಿಯ ಸುಳಿವು ದೊರೆತ ಇವರು 1398ರಲ್ಲಿ ದೆಲ್ಲಿಯಿಂದ ದಕ್ಷಿಣಕ್ಕೆ ಮತ್ತೆ ಬಂದರು. ಬಹಮನಿ ರಾಜ್ಯದ ರಾಜಕೀಯದಲ್ಲಿ ಸಕ್ರಿಯ ಪಾತ್ರವನ್ನು ವಹಿಸಿದ್ದ ಇವರು, ಫಿರೋಜಶಹನ ವಿರುದ್ಧವಾಗಿ ಆತನ ಸೋದರ ಅಹ್ಮ ದಶಾಹ ಪಟ್ಟಕ್ಕೆ ಬರುವಂತೆ ಮಾಡಿದರು. ಸಂತುಷ್ಟನಾದ ಬಾದಷಹನು ಜಹಗಿರಿಯನ್ನು ಕೊಟ್ಟದನ್ನು ಸ್ವೀಕರಿಸಿದ ಬಂದೇ ನವಾಬರು ರಾಜನಿಗೆ ತಮ್ಮನ್ನು ಅರ್ಪಿಸಿಕೊಂಡರು. ಬಹಮನಿಯರಾದ ಬಂದೆ ನವಾಬರು, 1422ರಲ್ಲಿ ಕಾಲವಾದರು. ಬಹಮನಿ ಸುಲ್ತಾನರು ಅವರ ಸಮಾಧಿಯನ್ನು ಭವ್ಯವಾಗಿ ರಚಿಸಿದರು. ಅನಂತರದಲ್ಲಿ ಬಿಜಾಪುರ ಆದಿಲ್‌ಷಾಹಿ ಅರಸರು 1640ರಲ್ಲಿ ಬಂದೇ ನವಾಬರ ಸಮಾಧಿಯನ್ನು ಇನ್ನಷ್ಟು ಸುಂದರವಾಗಿ ಕಾಣುವಂತೆ ವಿಸ್ತಾರವಾಗಿ ರಚಿಸಿದರು. ಬಿಜಾಪುರದವರೆಲ್ಲ ಬಂದೇ ನವಾಬರ ಮನೆತನದವರನ್ನೆಲ್ಲಾ ಬಹಳ ಗೌರವದಿಂದ ನೋಡಿಕೊಳ್ಳುತ್ತಾರೆ. ಇಂದಿಗೂ ಸೂಫಿ ಸಂತರ ಸಮಾಧಿಗಳು ಮುಸ್ಲಿಮರಿಗೆ ಪವಿತ್ರ ಯಾತ್ರಾಸ್ಥಳಗಳಾಗಿವೆ. ಸಂತರ ಪುಣ್ಯ ತಿಥಿಗಳಂದು ಆಚರಿಸುವ ಉರೂಸ್ ಸಮಾರಂಭಕ್ಕೆ ಮತಬೇಧವಿಲ್ಲದೆ ಅಪಾರ ಸಂಖ್ಯೆಯಲ್ಲಿ ಸೇರುತ್ತಾರೆ.

ಸೂಫಿಗಳು ಇಸ್ಲಾಂ ಧರ್ಮದ ಅನುಭಾವಿಗಳು. ಇವರು ಇಸ್ಲಾಂ ಧರ್ಮದ ಚೌಕಟ್ಟಿನಲ್ಲಿದ್ದುಕೊಂಡೇ ಅದರ ಪುರೋಹಿತಶಾಹಿ ವ್ಯವಸ್ಥೆಯನ್ನು ಧಿಕ್ಕರಿಸಿದರು. 17ನೆಯ ಶತಮಾನದಲ್ಲಿ ಬಿಜಾಪುರ ಸಂಸ್ಥಾನದಲ್ಲಿ ಆದಿಲ್‌ಷಾಹಿಯ ಆಳ್ವಿಕೆಯು ತನ್ನ ಉಚ್ಛ್ರಾಯ ಸ್ಥಿತಿಯಲ್ಲಿದ್ದಾಗ ಅದು ಭಾರತದ ಮೊಘಲರಿಗೆ ಎರಡನೆಯ ಸ್ಥಾನದಲ್ಲಿತ್ತು. 1686ರಲ್ಲಿ ಮೊಘಲರು ಈ ಸಂಸ್ಥಾನವನ್ನು ಆಕ್ರಮಿಸಿದರು. ಬಿಜಾಪುರದ ಮುಸ್ಲಿಂ ಆಳ್ವಿಕೆಯನ್ನು ಕೊನೆಗೊಳಿಸಿದವರು ದೆಹಲಿಯ ಮಿಸ್ಲಂ ಅರಸರೇ ಎಂಬುದನ್ನು ಮರೆಯಬಾರದು. ಈ ಆಕ್ರಮಣದ ಒಂದು ತಲೆಮಾರಿನೊಳಗೆ ಆ ಪ್ರದೇಶದಲ್ಲಿ ತಲೆದೋರಿದ ಪ್ಲೇಗ್, ಭೀಕರ ಅನಾವೃಷ್ಟಿ, ಅತಿವೃಷ್ಟಿಗಳಿಂದ ಅಲ್ಲಿ ಜನರು ಕಷ್ಟಪಡುವಂತಾಯಿತು. ಆ ವೇಳೆಗೆ ಸೂಫಿ ಅನುಭಾವ ಒಂದು ಪಂಥವಾಗಿ ಬೆಳೆದು ಶಿಷ್ಯವೃತ್ತಿ ಒಂದು ಅಂಗವಾಗಿತ್ತು. ಸೂಫಿಗಳ ಜನಪ್ರಿಯತೆಯನ್ನು ಕಂಡ ಮುಸ್ಲಿಂ ರಾಜರು, ಈ ಸಂತತಿಗೆ ಜಮೀನು ಕಪ್ಪ ಕಾಣಿಕೆಗಳನ್ನು ಕೊಡಲು ಪ್ರಾರಂಭಿಸಿದರು. ಇದರಿಂದಾಗಿ ಸೂಫಿ ಸಂತರಿಗೆ ತುಂಬಾ ಸಹಾಯವಾಯಿತು. ಯಾರೆ ಆಗಲಿ ಒಮ್ಮೆ ಸಂಪತ್ತಿಗೆ ಒಡೆಯರಾದರೆ, ಅವರ ಅನಂತರ ಆ ಸಂಪತ್ತಿಗೆ ಒಡೆಯರಾರೆಂಬ ಜಿಜ್ಞಾಸೆ ಸಹಜ. ಸೂಫಿಗಳ ಜಮೀನು ಕಾಣಿಕೆಗಳ ಉತ್ತರಾಧಿಕಾರದ ಬಗ್ಗೆಯೂ ವಿವಾದಗಳು ತಲೆದೋರಿದವು. ಹೆಚ್ಚಿನ ಸಂದರ್ಭಗಳಲ್ಲಿ ಆ ಸಂತರ ವಂಶಸ್ಥರೇ ಅವರ ಆಸ್ತಿಪಾಸ್ತಿಗಳ ಉತ್ತರಾಧಿಕಾರಿಗಳಾದರು. ಯಾತ್ರಾ ಕೇಂದ್ರಗಳ ದರ್ಗಾಗಳ ಉಸ್ತುವಾರಿ, ಅವುಗಳ ಆದಾಯ ಇತ್ಯಾದಿಗಳು ವಂಶಪಾರಂಪರ್ಯವಾಗಿ ಅನುಭವಿಸುವ ಹಕ್ಕಾಯಿತು. ಹಿಂದೂ ಧರ್ಮದ ಮಠ ಮಾನ್ಯಗಳಂತೆ ಸೂಫಿ ಪಂಥ ಕೂಡ ಒಂದು ವ್ಯವಸ್ಥೆಯಾಯಿತು. ಎಲ್ಲಾ ವ್ಯವಸ್ಥೆಗಳಲ್ಲಾಗುವಂತೆ ಇಲ್ಲಿಯೂ ಮೂಲ ತತ್ತ್ವಗಳು ಬದಿಗೆ ಸರಿದು ಆಚರಣೆಗಳು, ಕಟ್ಟುಪಾಡುಗಳು ವಿಜೃಂಭಿಸತೊಡಗಿದವು. ಬಿಜಾಪುರದ ಸೂಫಿ ಪಂಥ ಈ ಘಟ್ಟವನ್ನು ತಲುಪಿದಾಗ, ಎಂದರೆ ಸರಿಸುಮಾರು ಸಂಸ್ಥಾನದ ಪತನದ ವೇಳೆಗೆ, ಈ ಪಂಥದ ಒಳಗೆ ಮತ್ತೆ ಬಂಡಾಯ ಕಾಣಿಸಿಕೊಂಡಿತು. ಸಮಾಜದ ಯಾವ ಮರ್ಯಾದೆಯನ್ನೂ ಲೆಕ್ಕಿಸದೆ, ಎಲ್ಲವನ್ನೂ ಧಿಕ್ಕರಿಸಿದ 'ದರ್ವೇಶ್' ಸೂಫಿಗಳೇ ಈ ಬಂಡಾಯದ ನಾಯಕರು. ರಾಜಕೀಯ ಅನಾಯಕತೆ, ಸಾಂಕ್ರಾಮಿಕ ರೋಗ ಬರಗಾಲ, ಪ್ರವಾಹಗಳ ಹಾವಳಿಯಿಂದ ದಿಕ್ಕೆಟ್ಟ ಬಿಜಾಪುರದ ಸಂಸ್ಥಾನದ ಮೂರಾಬಟ್ಟೆಯಾದ ಬದುಕಿಗೆ ಈ ದರ್ವೇಶರ ವಿಲಕ್ಷಣ ಬದುಕು ಕನ್ನಡಿ ಹಿಡಿದಂತಿತ್ತು. ಪ್ರಾಕೃತಿಕ ವಿಕೋಪಗಳಿಂದಾಗಿ ಅಂದಿನ ಕಾಲದಲ್ಲಿಯೂ ಸಂಸ್ಥಾನಗಳು ಸಂಕಷ್ಟವನ್ನು ಅನುಭವಿಸುತ್ತಿದ್ದವೆಂಬುದನ್ನು ನಾವಿಲ್ಲಿ ಮನಗಾಣಬಹುದಾಗಿದೆ.

ಬಿಜಾಪುರದ ಸೂಫಿಗಳು ಅವರ ಕಾಲದ ಉಲೇಮಾಗಳು, ಅರಸರು ಮತ್ತು ಮುಸ್ಲಿಮೇತರ ಸಮುದಾಯಗಳು ಜತೆಗೆ ಹೊಂದಿದ್ದ ಸಂಬಂಧಗಳು ಬಹುಮಟ್ಟಿಗೆ ಆರೋಗ್ಯಕರವಾಗಿತ್ತು. ಇಸ್ಲಾಂ ಪುರೋಹಿತಷಾಹಿಗೆ ಪ್ರಕ್ರಿಯೆಯಾಗಿ ಹುಟ್ಟಿಕೊಂಡ ಸೂಫಿ ಪಂಥ ಕ್ರಮೇಣ ತಾನೇ ಒಂದು ವ್ಯವಸ್ಥೆಯಾಗಿ, ಅದರೊಳಗೆ ಮತ್ತೆ ಬಂಡಾಯ ತಲೆದೋರಿತು. ಸಾಮಾಜಿಕ ಸಂಗತಿಗಳು ನಿರಂತರ ಬದಲಾಗುತ್ತಲೇ ಇರುತ್ತವೆ. ತಮ್ಮ ಕಾಲದ ಸಮಾಜ ಮಾಡಿದ ಪರಿಣಾಮ ಮತ್ತು ಆ ಕಾಲದ ಸಾಮಾಜಿಕ ಬೆಳವಣಿಗೆಗಳು ಸೂಫಿಗಳ ಬದುಕನ್ನು ಬದಲಾಯಿಸಿದುದೆಲ್ಲವೂ ಭೂತಕಾಲದ ಸತ್ಯಗಳಾಗಿವೆ. ಬಂಡಾಯಗಳು ಎಲ್ಲಾ ಸಮಾಜಗಳಲ್ಲಿಯೂ ಇತಿಹಾಸದುದ್ದಕ್ಕೂ ನಿರಂತರವಾಗಿ ನಡೆಯುವುದನ್ನು ಹಾಗೂ ಅದರಿಂದಾಗಿ ಆಗುವ ಬದಲಾವಣೆಗಳನ್ನು ನಾವಿಲ್ಲಿ ಗಮನಿಸಬಹುದಾಗಿದೆ.

**ಜಾಗತಿಕ ಮಟ್ಟದಲ್ಲಿ ಸೂಫಿ ಪಂಥಗಳಲ್ಲಾಗಿದ್ದ ಭಿನ್ನತೆಗಳನ್ನು ಈ ಕೆಳಗಿನ ಘಟ್ಟಗಳಲ್ಲಿ ವಿದ್ವಾಂಸರು ಗುರುತಿಸುತ್ತಾರೆ.**

1. ಕ್ರಿ.ಶ ಎಂಟನೆಯ ಶತಮಾನದಲ್ಲಿ ಮಧ್ಯ ಪ್ರಾಚ್ಯದ ಅರಸರನ ಶ್ರೀಮಂತಿಕೆ, ಆಡಂಬರ, ಲೋಲುಪತೆಗಳಿಗೆ ಹೇಸಿಕೊಂಡ ಸಂತರು, ಪ್ರವಾದಿ ಮಹಮ್ಮದರ ಸರಳತೆ ಮತ್ತು ಬೋಧನೆಗಳಿಗೂ– ಈ ಅರಸರ ಶ್ರೀಮಂತಿಕೆಗೂ ವ್ಯತ್ಯಾಸವನ್ನು ಕಂಡುಹಿಡಿದರು. ಅರಸರ ವಿರುದ್ಧ ಧ್ವನಿಯೆತ್ತಿದ ಈ ಸಂತರು ಸೂಫಿ ಪಂಥದ ಮೊದಲ ಪ್ರವರ್ತಕರು. ಇವರು ಸರಳ ಜೀವನ, ಭಕ್ತಿ, ವಿರಕ್ತಿ ಮತ್ತು ಆತ್ಮಾವಲೋಕನದ ನಿರಂಕುಶ ಮೌಲ್ಯಗಳನ್ನು ಪ್ರತಿಪಾದಿಸಿದಂತೆ ಬಾಳಿದರು. ಇದು ಕನ್ನಾಕ ಎಂದು ಕರೆಸಿಕೊಳ್ಳುವ ಮೊದಲ ಘಟ್ಟ.
2. ಸಂತರ ಶಿಷ್ಯರನ್ನು ಸ್ವೀಕರಿಸಿ ಈ ಶಿಷ್ಯರು ಗುರುವಿನ ಉಪದೇಶಗಳನ್ನು ಮತ್ತು ಜೀವನ ಚರಿತ್ರೆಯನ್ನು ಮುಂದಿನ ತಲೆಮಾರಿನ ಅನುಯಾಯಿಗಳಿಗೆ ಬೋಧಿಸುವುದು ಸೂಫಿ ಪಂಥದ ಎರಡನೆಯ ಘಟ್ಟ. ಇದನ್ನು ತಾರಿಕಾ ಎಂದು ಕರೆಯಲಾಗಿದೆ.
3. ಸಂತರು ರಾಜಮನ್ನಣೆಯನ್ನು ಮತ್ತು ಅದರೊಟ್ಟಿಗೆ ಬರುವ ಜಮೀನು ಕಾಣಿಕೆಗಳನ್ನು ಪಡೆದು, ಅದರ ವಂಶದವರೇ ಪರಂಪರೆ ಹಾಗೂ ಆಸ್ತಿ ಎರಡಕ್ಕೂ ವಾರಸುದಾರರಾಗಿ, ತತ್ತ್ವವೊಂದು ವ್ಯವಸ್ಥೆಯಾಗಿ ಮಾರ್ಪಡುವ ಪ್ರಕ್ರಿಯೆ, ಮೂರನೆಯ ಘಟ್ಟದಲ್ಲಿ ಪೂರ್ಣಗೊಳ್ಳುತ್ತದೆ. ಈ ಹಂತದಲ್ಲಿ ಸೂಫಿ ಪಂಥ, ಭಕ್ತಿ ಪಂಥದ ಸರಳತೆ, ಜನಪ್ರಿಯತೆಯನ್ನು ಮೈಗೂಡಿಸಿಕೊಳ್ಳುತ್ತದೆ. ಸಂತರ ಪವಾಡ ಶಕ್ತಿಗಳ ಬಗೆಗೆ

ಕತೆಗಳು ಹುಟ್ಟಿಕೊಳ್ಳುತ್ತವೆ. ಸೂಫಿಪಂಥದ ಈ ಕಾಲಘಟ್ಟವನ್ನು ತಾಯೆಫಾ ಎಂದು ಕರೆಯುತ್ತಾರೆ. ಈಟನ್ ಪ್ರಕಾರ ಬಿಜಾಪುದ ಸೂಫಿಗಳು ಮೇಲೆ ಹೇಳಿದ ಕಡೆಯ ಎರಡು ಹಂತದವರು. ಆದರೆ ಜಾಗತಿಕವಾಗಿ ಸೂಫಿ ಪಂಥ, ತನ್ನ ಮೊದಲ ದಿನಗಳ ಹುರುಪು, ಅನುಭಾವ, ಏಕಾಗ್ರತೆ, ಬಡತನದ ವೃತ್ತಗಳನ್ನು ಕೈಬಿಟ್ಟು ಅಧಿಕಾರ, ಸಂಪತ್ತು ಜನಪ್ರಿಯತೆಗಳತ್ತ ಸಾಗುತ್ತಿದ್ದ ಕಾಲಘಟ್ಟದವರು.

ಸೂಫಿ ಪಂಥ ಬಿಜಾಪುರವನ್ನು ಪ್ರವೇಶಿಸಿದ್ದು ಒಂದು ಆಕಸ್ಮಿಕ ಸಂದರ್ಭ. ಉತ್ತರ ಭಾರತದಲ್ಲಿ ಮಹಮ್ಮದ್ ತುಘಲಕ್ ಆಳುತ್ತಿದ್ದಾಗ ಈ ಸಂತರು ತನ್ನ ಅಧೀನದಲ್ಲಿರಬೇಕು, ತಾನು ಕೊಟ್ಟ ಸಮವಸ್ತ್ರ ಧರಿಸಬೇಕು ಎಂಬುದು ತುಘಲಕ್‌ನ ಬಯಕೆಯಾಗಿತ್ತು. ಇದಕ್ಕೆ ಸಂತರು ಒಪ್ಪಲಿಲ್ಲ. ಕ್ರಿ.ಶ 1327ರಲ್ಲಿ ತುಘಲಕ್ ತನ್ನ ರಾಜಧಾನಿಯನ್ನು ದೆಹಲಿಯಿಂದ ದೌಲತಾಬಾದಿಗೆ ವರ್ಗಾಯಿಸಿದಾಗ, ದೆಹಲಿಯ ಉಳಿದ ಪ್ರಜೆಗಳಂತೆ ಅಲ್ಲಿನ ಬಿಸ್ತಿ ಸಂತನೂ ದೌಲತಾಬಾದಿಗೆ ತೆರಳಬೇಕೆಂದು ರಾಜಾಜ್ಞೆ, ಆದ್ದರಿಂದ ಸೂಫಿ ಸಂತರು ದಕ್ಷಿಣಕ್ಕೆ ಬರಬೇಕಾಯಿತು. 1347ರಲ್ಲಿ ಗುಲ್ಬರ್ಗಾದಲ್ಲಿ ಬಹುಮನಿ ಸಾಮ್ರಾಜ್ಯ ಸ್ಥಾಪನೆಯಾದಾಗ ಈ ಸೂಫಿಗಳಿಗೆ ರಾಜಾಶ್ರಯವೂ ದೊರೆಯಿತು. ಬಹಮನಿ ಅರಸರಿಗೆ ತಮ್ಮ ಆಳ್ವಿಕೆಯನ್ನು ಬಲಪಡಿಸಲು ಸೂಫಿ ಸಂತರ ಬೆಂಬಲ ಬೇಕಾಗಿತ್ತು. ರಾಜ ಮನೆತನದವರೂ ಸಹ ತಮ್ಮ ಆಳ್ವಿಕೆಯನ್ನು ಬಲಪಡಿಸಿಕೊಳ್ಳಲು ಹಾಗೂ ತಮ್ಮ ಭದ್ರ ಬುನಾದಿಗಾಗಿ ಸೂಫಿ ಸಂತರನ್ನು ಅವಲಂಭಿಸಿದ್ದರೆಂದು ನಾವು ಈ ಮೇಲಿನ ಅಂಶಗಳಿಂದ ತಿಳಿದುಕೊಳ್ಳಬಹುದಾಗಿದೆ.

ಉತ್ತರ ಕರ್ನಾಟಕಕ್ಕೆ ಸೂಫಿ ಸಂತರು ಬರುವುದಕ್ಕೆ ತುಘಲಕ್‌ನ ಹುಚ್ಚು ನಿರ್ಧಾರವೊಂದು ತಕ್ಷಣದ ಕಾರಣವಾದರೂ ಆ ಪಂಥ ಇಲ್ಲಿ ನೆಲೆಯೂರುವುದಕ್ಕೆ ಬೇರೆ ಹಿನ್ನಲೆಗಳೂ ಇವೆ. ಈ ಪ್ರದೇಶ ಕನ್ನಡ, ಮರಾಠಿ, ತೆಲುಗು ಭಾಷಿಕ ಸಂಸ್ಕೃತಿಯ ನೆಲೆಗಳ ಮಧ್ಯದಲ್ಲಿದ್ದು ಹೊರಗಿನ ಪ್ರಭಾವಗಳಿಗೆ ಸದಾ ತೆರೆದುಕೊಂಡಿತ್ತು. ಜೊತೆಗೆ ಕನ್ನಡದ ವಚನಕಾರರ ಮತ್ತು ಹರಿದಾಸರ ಚಳುವಳಿ ಮತ್ತು ಮರಾಠಿ ಭಕ್ತಿ ಚಳುವಳಿಗಳು ನಡೆದುದು ಇಲ್ಲಿಯೇ. ಬಸವನ ಬಾಗೇವಾಡಿ, ಮರಾಠಿ ಭಕ್ತಿ ಪಂಥದ ಕೇಂದ್ರವಾದ ಪಂಡರಾಪುರ ಮತ್ತು ಹರಿದಾಸರ ನೆಲೆವೀಡಾಗಿದ್ದ ಹಂಪೆ ಮೊದಲಾದ ಸಾಂಸ್ಕೃತಿಕ ಕೇಂದ್ರಗಳು ಬಿಜಾಪುರಕ್ಕೆ ಹತ್ತಿರದಲ್ಲಿಯೇ ಇವೆ. ಹೀಗೆ ಹಲವು ಭಾಷೆಗಳು ಮತ್ತು ವೈಚಾರಿಕ ಚಳುವಳಿಗಳ ಕೇಂದ್ರದಲ್ಲಿದ್ದು, ಸಂಸ್ಕೃತಿಯ ಕುಲುಮೆಯಾಗಿದ್ದ ಈ ಪ್ರದೇಶಕ್ಕೆ ಸೂಫಿ ಪಂಥದ ಆಗಮನವಾಗುತ್ತದೆ. ಹೀಗೆ ಸೂಫಿ ಸಂತರು ಉತ್ತರ ಕರ್ನಾಟಕಕ್ಕೆ ಬರುವುದಕ್ಕೆ ಅನೇಕ ಅಂಶಗಳು ಕಾರಣವಾಗಿವೆ ಎಂಬುದನ್ನು ನಾವಿಲ್ಲಿ ಮನಗಾನಬಹುದು.

ಈಟನ್ ತನ್ನ ಪುಸ್ತಕದಲ್ಲಿ ಸೂಫಿಪಂಥದ ತಾತ್ವಿಕತೆ ಮತ್ತು ಬಿಜಾಪುರ ಸೂಫಿಗಳ ಪ್ರಾದೇಶಿಕ ವೈಶಿಷ್ಟ್ಯಗಳ ಕುರಿತು ಬರೆದಿದ್ದಾರೆ. ಸೂಫಿ ಎಂದರೆ ದೇವರನ್ನು ಸಾಕ್ಷಾತ್ಕರಿಸಿಕೊಳ್ಳಬಹುದು ಎಂದು ನಂಬಿದವ ಮತ್ತು ಆ ಅನುಭವಕ್ಕೆ ಸಿದ್ಧನಾಗಲು ಬೇಕಾದ ಪರವಶತೆಯನ್ನು ಪಡೆಯುವುದಕ್ಕೆ ಸಮಾಜದ ನಿಯಮಗಳನ್ನು ಧಿಕ್ಕರಿಸಿದವನು. ಸೂಫಿ ಸಂತರಲ್ಲಿ ಇಸ್ಲಾಂ ನಿಷೇಧಿಸಿದ ಭಂಗಿ ಸೇವನೆ, ಕುಡಿತ ಹಾಡು, ನೃತ್ಯಗಳಲ್ಲಿ ಮೈಮರೆಯುವವರೂ ಇದ್ದರು. ಎಲ್ಲಾ ಸೂಫಿಗಳು ಇಂಥವರಾಗಿರಲಿಲ್ಲ. ಉಲೇಮಾಗಳಿಗಿಂತಲೂ ಹೆಚ್ಚು ಸಂಪ್ರದಾಯ ಶರಣರು ಇಸ್ಲಾಮಿನೊಳಗೆ ನುಸುಳಿಕೊಂಡು ಇಸ್ಲಾಮೇತರ ಪ್ರಬಾವಗಳನ್ನು ಹೋಗಲಾಡಿಸಬೇಕೆಂದು ಪ್ರತಿಪಾದಿಸುತ್ತಿದ್ದವರೂ ಇದ್ದರು. ಸೂಫಿಗಳಿಗೆ ರಾಜಾಶ್ರಯ ದೊರೆತಾಗ, ಅವರು ತಮ್ಮ ಬಂಡಾಯ ಮನೋವೃತ್ತಿಯನ್ನು ಬಿಟ್ಟುಕೊಟ್ಟುದೂ ಉಂಟು. ಆದರೆ ಎಲ್ಲ ಸೂಫಿಗಳು ಯಾರ ಹಂಗಿಗೂ ಸಿಕ್ಕದ ತಿರುಕರಾಗಿರಲಿ ಅಥವಾ ರಾಜಾಶ್ರಯ ಪಡೆದ ಆಢ್ಯರಾಗಿರಲಿ ದೇವರಿಗೂ ಭಕ್ತರಿಗೂ ನಡುವೆ ತಾವು ಒಂದು ಸೇತುವೆಯಿದ್ದಂತೆ ಎಂದು ಭಾವಿಸಿದ್ದರು. ಇಸ್ಲಾಂ ಸಂಪ್ರದಾಯ ದೇವರು ಮತ್ತು ಮನುಷ್ಯರ ನಡುವೆ ಇಂತಹ ಮಧ್ಯವರ್ತಿಗಳನ್ನು ಮನ್ನಿಸುವುದಿಲ್ಲ. ಇಸ್ಲಾಂ ಉಲೇಮಾಲ ಬದಲು, ಸೂಫಿಗಳು – ಫಿರ್ – ಮುರೀದ್ ಪರಂಪರೆಯನ್ನು ಒಪ್ಪಿಕೊಂಡಿದ್ದರು. ಹೀಗಾಗಿ ಸೂಫಿಗಳು ಮತ್ತು ಅವರ ದರ್ಗಾಗಳು ಉಲೇಮಾ ಮತ್ತು ಮಸೀದಿಗಳಿಗೆ ಪರ್ಯಾಯವಾದ ಶ್ರದ್ಧಾ ಕೇಂದ್ರಗಳಾದವು.

ಸೂಫಿ ಪಂಥದ ಅಂತಃಸತ್ವವಿರುವುದು ಅದರ ಅನುಭಾವೀ ದಾರ್ಶನಿಕತೆಯಲ್ಲಿ. ಅದು ಎತ್ತಿ ಹಿಡಿದ ಬಡತನದ ಬದುಕಿನಲ್ಲಿ ಮತ್ತು ತನ್ನ ಒಳಧ್ವನಿಗೆ ಮಾತ್ರ ಶರಣಾಗಿ ನಡೆಯುವ ನಿರ್ಧಾರದಲ್ಲಿ ಚಿಸ್ತಿ ಸೂಫಿಗಳು ಜನರಿಂದ ಭೂಮಿ ಹಣಗಳನ್ನು ಬಹುಮಾನವಾಗಿ ಪಡೆಯುವುದನ್ನು ಕಟ್ಟುನಿಟ್ಟಾಗಿ ನಿಷೇದಿಸಿದ್ದರು. ಅವರ ಬೋಧನಾ ಕೇಂದ್ರಗಳು ಎಲ್ಲಾ ವರ್ಗದ ಜನರಿಗೂ ತೆರೆದಿದ್ದುವು. ಈ ಮೊದಲೇ ಗುರುತಿಸಿರುವಂತೆ, ಬಂದೇ ನವಾಜರಲ್ಲಿ ಅನುಯಾಯಿಗಳಲ್ಲಿ ಅರಸು ಮನೆತನದವರು ಶ್ರೀಮಂತರು ಮತ್ತು ಉಚ್ಚ ಕುಲದವರು ಮಾತ್ರವಲ್ಲದೆ ದರ್ಜಿಗಳು, ಸಮಗಾರರು ಮತ್ತು ಕಮ್ಮಾರರು ಇದ್ದರು. ಇದರ ಮೂಲಕ ಸೂಫಿ ಪಂಥದಲ್ಲಿ ಯಾವುದೇ ರೀತಿಯ ತಾರತಮ್ಯವಿರದೆ ಎಲ್ಲಾ ಜನಾಂಗದವರಿಗೂ ಮುಕ್ತವಾಸದ ಅವಕಾಶವಿತ್ತೆಂದು ಹೇಳಬಹುದಾಗಿದೆ.

ಬಿಜಾಪುರ ಸಂಸ್ಥಾನದಲ್ಲಿ ಸೂಫಿ ಪಂಥ ಉತ್ತುಂಗ ತಲುಪಿದ ಸಮಯದಲ್ಲಿಯೇ, ಸಂಸ್ಥಾನ ಹಿಂದೂ ಮುಸ್ಲಿಂ ಸಂಗಮ ಸಂಸ್ಕೃತಿಯ ಒಂದು ಕೇಂದ್ರವೂ ಆಯಿತೆಂದು ತಿಳಿದುಬರುತ್ತದೆ. ಈ ಬೆಳವಣಿಗೆಯನ್ನು ಮನಪೂರ್ವಕವಾಗಿ ಪ್ರೋತ್ಸಾಹಿಸಿದ ಸುಲ್ತಾನರಲ್ಲಿ ಮುಖ್ಯನಾದವನು ಎರಡನೆಯ ಇಬ್ರಾಹಿಂ (1580–1627). ಹಿಂದೂ ಮತೀಯವಾದಿ ಚರಿತ್ರೆ ಇಬ್ರಾಹಿಂನನ್ನು ಅಲಕ್ಷಿಸಿದ್ದರೂ ಕೂಡ ಆತ ಕರ್ಣಾಟಕದ ಶ್ರೇಷ್ಠ ರಾಜರಲ್ಲಿ ಒಬ್ಬನಾಗಿದ್ದ ಎಂಬುದರಲ್ಲಿ ಸಂಶಯವಿಲ್ಲ. ಇವನು ಆಡಳಿತದ ಹಿರಿಯ ಹುದ್ದೆಗಳಿಗೆ ಪರ್ಷಿಯನ್ ಭಾಷೆಯ ಇರಾನಿ ಮುಸ್ಲಿಮರನ್ನು ನೇಮಿಸುವ ಪದ್ಧತಿಯನ್ನ ನಿಲ್ಲಿಸಿ ಸ್ಥಳೀಯ ಮುಸ್ಲಿಮರನ್ನಲ್ಲದೆ; ಹಿಂದೂಗಳನ್ನು ಅಧಿಕಾರ ಸ್ಥಾನಕ್ಕೆ ನೇಮಿಸಿದ್ದಾನೆ. ಆತ ತನ್ನ ರಾಜ್ಯದಲ್ಲಿ ಹಿಂದೂ ಹಾಗೂ ಕ್ರಿಶ್ಚಿಯನ್ ಧರ್ಮಗಳಿಗೂ ಪ್ರೋತ್ಸಾಹ ನೀಡಿದ್ದಾನೆ. ಸ್ವತಃ ಸೂಫಿ ಪಂಥದ ಅನುಯಾಯಿಯಾಗಿದ್ದ ಈತನ ಕಾಲದಲ್ಲಿ ಬಿಜಾಪುರದ ಹತ್ತಿರದ ಷಹಾಪುರದ ಗುಡ್ಡ ಚಿಸ್ತಿ ಸೂಫಿಗಳ ಬಹುದೊಡ್ಡ ಕೇಂದ್ರವಾಗಿತ್ತು. ಇಲ್ಲಿನ ಸೂಫಿಗಳು ಆದಿಲ್ ಶಾಹಿ ರಾಜಕೀಯ ಪ್ರಭುತ್ವ ಮತ್ತು ಉಲೇಮಾಗಳ ಪುರೋಹಿತಷಾಹಿ ಎರಡಕ್ಕೂ ದೂರವಿದ್ದರು. ಇವರ ಕಾಲಾವಧಿಯಲ್ಲಿಯೇ ಉರ್ದು ಭಾಷೆಯ ಸ್ಥಳೀಯ ಪ್ರಭೇಧವಾದ ದಾಖ್ನಿ ರೂಪುಗೊಂಡಿತು. ಉತ್ತರ ಭಾರತದಲ್ಲಿ ಉರ್ದು, ಪರ್ಷಿಯನ್ ಪ್ರಭಾವದಿಂದ ಬಿಡಿಸಿಕೊಂಡು ಸ್ಥಳೀಯ ಮುಸ್ಲಿಂ ಆಳ್ವಿಕೆಯ ಸಂಸ್ಥಾನವೊಂದು ಇಲ್ಲಿ ಸ್ಥಾಪಿತವಾದದ್ದು. ಸೂಫಿ ಪಂಥ ಇಲ್ಲಿ ಎಲ್ಲ ವರ್ಗಗಳಲ್ಲಿಯೂ ಜನಪ್ರಿಯವಾದದ್ದು ಮತ್ತು ದಾಖ್ನಿಯ ಆವಿಷ್ಕಾರ – ಇವೆಲ್ಲವೂ ಮೂಲಭೂತವಾಗಿ ವಿಕೇಂದ್ರೀಕರಣದ ಪ್ರಕ್ರಿಯೆಗಳೆಂಬುದನ್ನು ನಾವು ಗಮನಿಸಬಹುದಾಗಿದೆ.

ಸೂಫಿ ಪಂಥವು ಹೆಂಗಸರು, ಕೆಳಜಾತಿಯವರು ಮತ್ತು ಕೆಳವರ್ಗದವರನ್ನು ಹೆಚ್ಚಾಗಿ ಆಕರ್ಷಿಸಿತು. ದರ್ಗಾಗಳು ಇಸ್ಲಾಂ ಮತ್ತು ಸ್ಥಳೀಯ ಧಾರ್ಮಿಕ ನಡಾವಳಿಗಳ ನಡುವೆ ಒಂದು ಸೇತುವೆಯಂತೆಯೂ ಕಾರ್ಯನಿರ್ವಹಿಸುತ್ತಿದ್ದವು. ದರ್ಗಾಗಳಿಗೆ ಹರಕೆ ಹೇಳಿಕೊಳ್ಳುವುದು, ಊದುಬತ್ತಿ ಸಿಹಿತಿಂಡಿ, ಹೂವು–ಹಣ್ಣು

ಸಮರ್ಪಿಸುವುದು, ಸಮಾಧಿಗಳಿಗೆ ಸುತ್ತು ಬಂದು ನಮಸ್ಕರಿಸುವುದು ಹಾಗೂ ಆಚರಣೆಗಳಲ್ಲೂ ಸ್ಥಳೀಯ ಪದ್ಧತಿಗಳ ಪ್ರಭಾವ ಸ್ಪಷ್ಟವಾಗಿದೆ. ಸೂಫಿಗಳು ತಮ್ಮ ಸೃಜನಶೀಲ ಬರವಣಿಗೆಗಳಲ್ಲೂ, ಸ್ಥಳೀಯ ಪರಂಪರೆಯ ಉಪಮೆ, ರೂಪಕಗಳನ್ನೇ ಬಳಸಿದರು. ಸೂಫಿ ಪಂಥದ ಪ್ರಕಾರ ದೇವರ ಹೆಸರನ್ನು ಗಟ್ಟಿಯಾಗಿ ಮತ್ತೆ ಮತ್ತೆ ಹೇಳುವುದು ಆರಾಧನೆಯ ಮೊದಲ ಹಂತ. ಹೀಗೆ ಹೇಳುತ್ತಾ ಸ್ವಂತದ ಅರಿವನ್ನು ಕಳಕೊಳ್ಳುವುದು ಎರಡನೆಯ ಹಂತ. ಮಿಂಚು ಕಂಡಂತೆ ಪರಮಾತ್ಮನ ದರ್ಶನವನ್ನು ಪಡೆಯುವುದು ಸಾಧನೆಯ ಕೊನೆಯ ಹಂತ. ಇಂದಿಗೂ ಕೂಡ ಅಂದು ಇದ್ದಂತಹ ಆಚರಣೆಗಳು, ಸಂಪ್ರದಾಯ ಪದ್ಧತಿಗಳು ಜೀವಂತವಾಗಿರುವುದನ್ನು ನಾವು ಕಾಣಬಹುದಾಗಿದೆ. ಸಂಪ್ರದಾಯ, ಪದ್ಧತಿಗಳು ಸದಾ ಹರಿಯುವ ನೀರಿನಂತೆ ಕಾಲಚಕ್ರದೊಂದಿಗೆ ನಿರಂತರವಾಗಿ ಸಾಗಿ ಬರುತ್ತಿವೆ ಎಂದು ಹೇಳಬಹುದು.

ಚಿಸ್ತಿ ಸೂಫಿ ಸಂತರಲ್ಲಿ ಪ್ರಮುಖನಾದ ಬುರನ್ ಆಲದಿನ್ 'ತಾವರೆ ಸೂರ್ಯನನ್ನು ಕಾಣುವಂತೆ, ಚಕೋರ ಚಂದ್ರಮನನ್ನು ಕಾಣುವಂತೆ, ಸಾಧುಗಳು ದೇವರನ್ನು ಕಾಣುವರು' ಎನ್ನುತ್ತಾನೆ. ಆ ಅನುಭವ, ದೀಪದ ಜ್ವಾಲೆಗೆ ಚಿಟ್ಟೆ ಬಲಿಯಾದಂತೆ, ಕರ್ಪೂರಕ್ಕೆ ಉರಿ ತಾಗಿದಂತೆ, ದೇವರು ಮತ್ತು ಭಕ್ತನ ತಾದಾತ್ಮ್ಯದಲ್ಲಿ ಒಂದೇ ಆಗಿರುವುದನ್ನು ವರ್ಣಿಸುವ ಇಂತಹ ಉಪಮೆ ರೂಪಕಗಳು ಕನ್ನಡದ ಭಕ್ತಿ ಸಾಹಿತ್ಯದಲ್ಲೂ ಹೇರಳವಾಗಿ ಬಳಕೆಯಾಗಿವೆ ಎಂದೆನ್ನಬಹುದು.

ಸೂಫಿ ಪಂಥ ಹಿಂದೂಗಳಲ್ಲಿಯೂ ಅನುಯಾಯಿಗಳನ್ನು ಪಡೆದದ್ದು ಮತ್ತು ಸೂಫಿಗಳು ಸ್ಥಳೀಯ ಸಂಸ್ಕೃತಿಯ ಪ್ರಭಾವಗಳಿಗೆ ತಮ್ಮನ್ನು ಒಡ್ಡಿಕೊಂಡ ಪ್ರಕ್ರಿಯೆ ಈಟನ್ ಪ್ರಕಾರ ಮತಾಂತರವಲ್ಲ. ಮತಾಂತರ ದೀಕ್ಷೆ ಕೊಡುವ ಧರ್ಮಗುರು ಮತ್ತು ಮತಾಂತರಕ್ಕೊಳಗಾಗುವ ಸಾಮಾನ್ಯ ಮನುಷ್ಯ ಇಬ್ಬರದ್ದೂ ಪ್ರಜ್ಞಾಪೂರ್ವಕವಾದ ಮತ್ತು ನಿಶ್ಚಿತ ಉದ್ದೇಶವುಳ್ಳ ಕ್ರಿಯೆಗಳು. ಆದರೆ ಸೂಫಿ ಸಂತರಿಗೆ ಕೆಳಜಾತಿಯ ಹಿಂದೂಗಳು ಅನುಯಾಯಿಗಳಾದದ್ದು ಅಂತಹ ಪ್ರಕ್ರಿಯೆಯಲ್ಲ. ಈಟನ್ ಇದನ್ನು ಸಂಸ್ಕೃತೀಕರಣದ ಪ್ರಕ್ರಿಯೆ ಎಂದು ಕರೆಯುತ್ತಾರೆ. ಇಬ್ಬರ ಪ್ರಜ್ಞಾಪೂರ್ವಕವಾದ ಸಮಯದಲ್ಲಿ ನಡೆಯುವಂತಹ ಮತಾಂತರವು ಮತಾಂತರವಲ್ಲ ಎಂಬ ಮಾತುಗಳು ಗಮನಾರ್ಹವಾದ ಸಂಗತಿಯಾಗಿದೆ.

ಸುಮಾರು ಎಂಟನೆಯ ಶತಮಾನದಲ್ಲಿ ಅರೇಬಿಯಾದಲ್ಲಿ ಹುಟ್ಟಿದ ಪ್ರೇಮಪಂಥ ಅರ್ಥಾತ್ ಸೂಫಿಪಂಥ ತನ್ನ ಸರಳ ಸಿದ್ಧಾಂತಗಳಿಂದಾಗಿ ಭಾರತದಲ್ಲೂ ಪ್ರಸಿದ್ಧವಾಯಿತು. ಸಾಧು ಸಂತರಾಗಿದ್ದ ಸೂಫಿಗಳು ತಮ್ಮ ಚಿಂತನೆಗಳನ್ನು ಜನಸಾಮಾನ್ಯರಲ್ಲಿ ಹಂಚಿಕೊಳ್ಳತೊಡಗಿದರು. ಹದಿನಾರು ಹದಿನೇಳನೆಯ ಶತಮಾನದಲ್ಲಿ ಉತ್ತರ ಕರ್ನಾಟಕದ ಬಹುಭಾಗಗಳಲ್ಲಿ ಸುತ್ತಾಡಿದ ಸೂಫಿಗಳು ಜನಮನದಲ್ಲಿ ಅಗಾಧ ಪ್ರಭಾವವನ್ನು ಉಂಟುಮಾಡಿದರು. ಜಾತಿ ಮತಗಳ ಭೇದವಿಲ್ಲದೆ ದೇವತಾರಾಧನೆಯ ಭವ್ಯ ಪರಂಪರೆಯನ್ನು ಅನುಷ್ಠಾನಗೊಳಿಸುವಲ್ಲಿ ಸೂಫಿಗಳ ಪಾತ್ರವು ಹಿರಿದಾದುದು. ರಾಜಾಶ್ರಯವನ್ನು ಪಡೆದು, ಆಸ್ಥಾನಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಕೆಲವು ಸೂಫಿ ಸಂತರನ್ನು ಬಿಟ್ಟರೆ, ಬಹಳ ಮಂದಿ ಸಂತರು, ಎಲೆಮರೆಯಲ್ಲಿಯೇ ಉಳಿದುಬಿಟ್ಟಿದ್ದಾರೆ. ಉತ್ತರ ಕರ್ನಾಟಕದ ಜನರ ಆಡುಮಾತುಗಳಲ್ಲಿ ಮಾತ್ರ ಜೀವಂತವಾಗಿರುವ ಸಾಧು ಸಂತರ ಬಗೆಗೆ ಲಿಖಿತ ದಾಖಲೆಗಳು ಲಭ್ಯವಿರುವುದಿಲ್ಲ. ದೇವತಾರಾಧನೆಗೆ ಯಾವುದೇ ರೀತಿಯ ಜಾತಿ ಮತಗಳ ತಾರತಮ್ಯವಿಲ್ಲ ಎಂಬುದನ್ನು ನಾವಿಲ್ಲಿ ಮನಗಾನಬಹುದು.

ಹದಿನೆಂಟನೆಯ ಶತಮಾನದ ಕೊನೆಯಾರ್ಧದಲ್ಲಿ ಮತ್ತು ಹತ್ತೊಂಭತ್ತನೆಯ ಶತಮಾನದಲ್ಲಿ, ಉತ್ತರ ಕರ್ನಾಟಕದ ಜನಪದ ಕ್ಷೇತ್ರದಲ್ಲಿ ಸಾಹಿತ್ಯ ಕೃಷಿಯನ್ನು ಮಾಡುತ್ತಿದ್ದ ಸೂಫಿ ತಲೆಮಾರಿನ ಹಲವಾರು ಕವಿಗಳನ್ನು ನಾವು ಗುರುತಿಸಬಹುದು. ಈ ನಿಟ್ಟಿನಲ್ಲಿ ಮಲ್ಲಿಕಾರ್ಜುನ ಶಿ. ಲಠ್ಠೆಯವರ 1979ರಲ್ಲಿ ಪ್ರಕಟಗೊಂಡ 'ಜನಪದ ಕವಿ ಚರಿತೆ' ಪ್ರಮುಖ ಗ್ರಂಥವಾಗುತ್ತದೆ. ಲೇಖಕರು ಉತ್ತರ ಕರ್ನಾಟಕದ ಕಲಬುರ್ಗಿ, ಬೀದರ್, ರಾಯಚೂರು, ಬಳ್ಳಾರಿ, ಧಾರವಾಡ ಮತ್ತು ಬೆಳಗಾವಿ ಜಿಲ್ಲೆಗಳಲ್ಲಿ ಸುಮಾರು ಇನ್ನೂರು ವರ್ಷಗಳ ಕಾಲ ಆಗಿಹೋದ ಜನಪದ ಕವಿಗಳ ಮಾಹಿತಿಗಳನ್ನು ತೀರಾ ಹತ್ತಿರದವರಿಂದ ಕೇಳಿ ತಿಳಿದುಕೊಂಡು ಜನಪದ ಕವಿ ಚರಿತೆಯನ್ನು ಬರೆದಿದ್ದಾರೆ. ಆ ಕಾಲದಲ್ಲಿ ಆಗಿಹೋದ ಇಪ್ಪತ್ತಾರು ಜನ ಮುಸ್ಲಿಂ ಕವಿಗಳನ್ನು ಡಾ. ಲಠ್ಠೆಯವರಯ ಗುರುತಿಸುತ್ತಾರೆ. ಕಲ್ಗೆ–ತುರಾಯಿ, ಲಾವಣಿ, ಭಜನೆ ಹಾಡು, ಮೊಹರ್ರಂ ಹಾಡು, ಮರ್ಸಿಯಾ ಹಾಡು ಮೊದಲಾದ ಜನಪದ ಪ್ರಕಾರಗಳಲ್ಲಿ ಈ ಕವಿಗಳು ತಮ್ಮನ್ನು ತೊಡಗಿಸಿಕೊಂಡಿದ್ದರು. ಈ ಕವಿಗಳ ತಂದೆ ತಾಯಿಯರ ಹೆಸರು, ಹುಟ್ಟಿದ ಸ್ಥಳ, ಉದ್ಯೋಗ ಮತ್ತು ಸಾಹಿತ್ಯ ಕಾರ್ಯ ಮೊದಲಾದವುಗಳನ್ನು ಲೇಖಕರು ಬಹು ಜವಾಬ್ದಾರಿಯಿಂದ ಗುರುತಿಸಿದ್ದಾರೆ. ಇವರಲ್ಲಿ ಶಿಶುನಾಳ ಶರೀಫ ಸಾಹೇಬರು ಪ್ರಮುಖರು. ಶರೀಫರ ಸಮಕಾಲೀನ ಮುಸ್ಲಿಂ ಜನಪದ ಕವಿಗಳ ಕುರಿತು ಡಾ. ಮಲ್ಲಿಕಾರ್ಜುನ ಶಿ. ಲಠ್ಠೆಯವರ ಜನಪದ ಕವಿ ಚರಿತೆಯನ್ನು ಆಧಾರವಾಗಿಟ್ಟುಕೊಂಡು ಕೆಲವೊಂದು ಮಾಹಿತಿಗಳನ್ನು ಸಂಗ್ರಹಿಸಲಾಗಿದೆ. ಇದು ಕರ್ನಾಟಕದಲ್ಲಿ ಸೂಫಿ ಪಂಥವು ಬೆಳೆದು ಬಂದ ರೀತಿಯಾಗಿದೆ.

**ಶಿಶುನಾಳ ಷರೀಫ**

ಶಿಶುನಾಳ ಷರೀಫರು 1819ರ ಮಾರ್ಚ್ 7ರಂದು ಧಾರವಾಡ ಜಿಲ್ಲೆಯ ಶಿಶುವಿನ ಹಾಲ ಎಂಬಲ್ಲಿ ಹುಟ್ಟಿದ ಕಳೆದ ಶತಮಾನದ ಹಿರಿಯ ಅನುಭಾವಿ ಕವಿಯಾಗಿದ್ದಾರೆ. ಇವರ ತಂದೆ ಇಮಾನ್ ಸಾಹೇಬ ಹಾಗೂ ತಾಯಿ ಹಜ್ಜುಮಾ. ಪ್ರಸಿದ್ಧ ವಾಗ್ಮಿಯಾಗಿದ್ದ ಹಜರೇಶಾ ಖಾದರಿ ಇಮಾನರು ಗುರು. ಖಾದರಿಯವರು ಹಿಂದೂ ಮುಸ್ಲಿಮರನ್ನು ಒಟ್ಟುಗೂಡಿಸಲು ಪ್ರಯತ್ನಿಸಿದರು. ಇಂತಹ ಸಂದರ್ಭದಲ್ಲಿ ಸಹಜವಾಗಿ ಎದುರಾದ ಸವಾಲೊಂದನ್ನು ಸ್ವೀಕರಿಸಿ, ಬಯಸಿದವರಿಗೆ ಲಿಂಗದೀಕ್ಷೆಯನ್ನು ಮಾಡಿಸಿ ಖಾದರ ಲಿಂಗ ಎಂದು ಪ್ರಸಿದ್ಧರಾದರು. ಇಂತಹ ಖಾದರ ಲಿಂಗರ ಶಿಷ್ಯರಾದ ಇಮಾಮರ ಮಗ ಶರೀಫರು ಹಿಂದೂ–ಮುಸ್ಲಿಂ ಧಾರ್ಮಿಕ ಸೌಹಾರ್ದತೆಯ ಪರಂಪರೆಯಲ್ಲಿ ಜನಪ್ರಿಯರಾಗುತ್ತಾರೆ.

ತಂದೆ ಇಮಾನ್ ಸಾಹೇಬರು ಶರೀಫರ ಮೊದಲ ಗುರುವಾಗಿದ್ದರು. ಮಾತೃಭಾಷೆ ಉರ್ದು, ಕಲಿಕೆಯ ಭಾಷೆ ಕನ್ನಡ. ತಂದೆಯಿಂದ ಕನ್ನಡವನ್ನು ಕಲಿತ ಶರೀಫರು ರಾಮಾಯಣ, ಮಹಾಭಾರತ ಹಾಗೂ ಶಿವಶರಣರ ಕತೆಗಳನ್ನೂ ಕೇಳಿ ತಿಳಿದುಕೊಳ್ಳುತ್ತಾರೆ. ಗೋವಿಂದ ಭಟ್ಟರೆಂಬ ಬ್ರಾಹ್ಮಣ ಗುರುವಿನ ಕೈಯಲ್ಲಿ ಪಳಗಿದವರು ಶರೀಫರು.

ಕಳಸದ ಗೋವಿಂದ ಭಟ್ಟರು ಸ್ಮಾರ್ತ ಬ್ರಾಹ್ಮಣರು. ಬಯಸಿ ಬಂದ ಹುಡುಗರಿಗೆ ವಿದ್ಯೆ ಕಲಿಸುವುದು ಅವರ ಕೆಲಸ. ಗೋವಿಂದ ಭಟ್ಟರು ಬ್ರಾಹ್ಮಣರಾಗಿದ್ದರೂ ಮಡಿ ಆಚರಣೆಗಳಿಗೆ ಬೆಲೆಯನ್ನು ಕೊಟ್ಟವರಲ್ಲ. ಪಾರಮಾರ್ಥಿಕ ವಿಚಾರಗಳ ಬಗೆಗೆ ಚಿಂತಿಸುತ್ತಿದ್ದ ಅವರು ಲೌಖಿಕ ಸಂಗತಿಗಳಿಗೆ ಬೆನ್ನು ಹಾಕಿದ್ದರು. ಸಿಕ್ಕ ಸಿಕ್ಕಲ್ಲಿ ಉಂಡು, ತಿಂದು, ಕುಡಿದು, ಜಾತಿಮತದ ಪರಿವೆಯಿಲ್ಲದೆ ಓಡಾಡಿಕೊಂಡಿದ್ದ ಗೋವಿಂದ ಭಟ್ಟರು ಸಂಪ್ರದಾಯಸ್ಥ ಬ್ರಾಹ್ಮಣರಿಗೆ ನುಂಗಲಾರದ ತುತ್ತಾಗಿದ್ದರು. 'ಇವರನ್ನು ಸೇರೆ ಕುಡೀತಾನ, ಗಾಂಜ ಸೇದುತಾನ, ಕುಡುಕರನ್ನು ಕಟ್ಟಿಕೊಂಡು ಪಿರಿಪಿರೀ ತಿರುಗುತಾನ' ಎಂಬುದಾಗಿ ಹಲವರು ನಿಂದಿಸುತ್ತಿದ್ದರು. ಆದರೂ ಅವರನ್ನು

ಮಹಾತಪಸ್ವಿಯೆಂದೂ, ಜ್ಞಾನಿಯೆಂದೂ, ಪವಾಡ ಪುರುಷರೆಂದೂ ಜನ ಗೌರವಿಸುತ್ತಿದ್ದರು. ಇವರ ಅಗಾಧ ವಾಕ್ ಸಾಮರ್ಥ್ಯಕ್ಕೆ ಮೆಚ್ಚಿ ಇಂಗ್ಲಿಷ್ ಸರಕಾರ ಅವರಿಗೆ ನಾಲ್ಕು ಕೂರಿಗೆ ಹೊಲ ನೀಡಿತ್ತಂತೆ. ಇಂತಹ ಉದಾರ ಸ್ವಭಾವದ ಪ್ರಸಿದ್ಧ ವ್ಯಕ್ತಿ ಗುರುವಾಗಿ ದೊರಕಿದುದರಿಂದಲೇ ಶರೀಫರು ಪ್ರಖ್ಯಾತಿಯನ್ನು ಪಡೆಯಲು ಸಾಧ್ಯವಾಯಿತು.

ಗೋವಿಂದ ಭಟ್ಟರು ತಮ್ಮ ಅಂತರಂಗದ ಶಿಷ್ಯನಿಗಾಗಿ ಹುಡುಕಾಡುತ್ತಾ ಶಿಶುನಾಳಕ್ಕೆ ಬಂದಾಗ ಇಮಾಮ್ ಸಾಹೇಬರು ತಮ್ಮ ಮಗ ಶರೀಫನನ್ನು ಅವರಿಗೆ ಒಪ್ಪಿಸುತ್ತಾರೆ. ಶರೀಫನನ್ನು ಪರೀಕ್ಷಿಸಲೆಂಬಂತೆ “ಲೋ ಶರೀಫ, ನಿನ್ನಪ್ಪ ಯಾರೋ?” ಎಂದು ಕೇಳಿದಾಗ ಶರೀಫ ಮತ್ತಾರೂ ಅಲ್ಲ ನಿಮ್ಮಪ್ಪನೇ ನನ್ನಪ್ಪ ಎಂದನಂತೆ. ಹುಡುಗನ ಮಾತನ್ನು ಕೇಳಿದ ಜನರು ದಂಗಾದರೆ, ಹುಡುಗನ ವೇದಾಂತದ ನೆಲೆಯನ್ನು ಅರಿತ ಭಟ್ಟರು ಆತನನ್ನು ಮೆಚ್ಚಿಕೊಳ್ಳುತ್ತಾರೆ. ಈ ಹುಡುಗ ತಮ್ಮ ಅಂತರಂಗದ ಶಿಷ್ಯನಾಗುವ ಶಕ್ತಿಯನ್ನು ಹೊಂದಿರುವವನೆಂದು ಭಾವಿಸಿ ಇಮಾಮ್ ಸಾಹೇಬರ ಒಪ್ಪಿಗೆಯನ್ನು ಪಡೆದುಕೊಂದು ಜೊತೆಗೆ ಕರೆದುಕೊಂಡು ಹೋಗುತ್ತಾರೆ. ಗೋವಿಂದ ಭಟ್ಟರಲ್ಲಿಗೆ ಶರೀಫನನ್ನು ಕಳುಹಿಸಲು ಇಮಾರರಿಗೂ ಬಹಳ ಮನಸ್ಸಿತ್ತಂತೆ.

ಗೋವಿಂದ ಭಟ್ಟರು ಹುಡುಗನಲ್ಲಿ ಅತೀಂದ್ರಿಯವಾದ ಶಕ್ತಿಯಿರುವುದನ್ನು ಗುರುತಿಸಿ, ಶರೀಫನನ್ನು ದೈವಕೊಟ್ಟ ವರವೆಂಬಂತೆ ಸ್ವಂತ ಮಗನಿಗಿಂತ ಮಿಗಿಲಾಗಿ ನೋಡಿಕೊಂಡು ಪೋಷಿಸಿ ಬೆಳೆಸಿದರು. ‘ಎತ್ತ ಹೋಗದೆ, ಚಿತ್ತವಲುಗದೆ ಗೊತ್ತಿನಲ್ಲಿಯೇ ಕಾಯ್ದುಕೊಂಡರು’ ಎಂಬುದಾಗಿ ಸ್ವತಃ ಶರೀಫರೇ ಹೇಳಿಕೊಂಡಿದ್ದಾರೆ. ಹುಡುಗ ಶರೀಫ ಗುರುಗಳಲ್ಲಿ ಅಪಾರ ಭಕ್ತಿ, ಗೌರವ ಹಾಗೂ ಆಕರ್ಷಣೆಯಿಂದ ತಂದೆ, ತಾಯಿ ದೈವ ಎಲ್ಲ ನೀನೇ ಎಂಬಂತೆ ಗುರುವಿಗೆ ಅರ್ಪಿತವಾಗುತ್ತಾನೆ. ಹೀಗೆ ಗುರು ಶಿಷ್ಯರ ಅಂತರಂಗಗಳು ಬೆಸೆದುಕೊಂಡು ಎಂದಿಗೂ ಅಗಲಲಾರದಂತಹ ಗೆಳೆಯರಾಗಿ ಒಟ್ಟುಗೂಡಿಕೊಂಡರು.

ಗೋವಿಂದ ಭಟ್ಟರ ಶಿಷ್ಯನಾದ ದಿನಗಳಿಂದಲೇ ಶರೀಫನ ಬಗೆಗೆ ಹಲವಾರು ಕತೆಗಳು ಹುಟ್ಟಿಕೊಂಡವು. ಒಮ್ಮೆ ಗೋವಿಂದ ಭಟ್ಟರು ಶರೀಫ ಸಹಿತ ಹಲವು ಶಿಷ್ಯರನ್ನು ಕರೆದುಕೊಂಡು ಹೊಲದಾಚೆಯ ಮಹಾಕಾಳಿ ದೇವಾಲಯಕ್ಕೆ ಕರೆದುಕೊಂಡು ಹೊರಟಿದ್ದರು. ದಾರಿ ಮಧ್ಯೆ ಮುಳ್ಳಿನ ಬೇಲಿ ಬಂದಾಗ ಗುರುಗಳು ತಮ್ಮ ಪಾದುಕೆಯನ್ನು ಮೆಟ್ಟಿಕೊಂಡು ಅದನ್ನು ದಾಟುತ್ತಾರೆ. ಆದರೆ ಶಿಷ್ಯರು ಬರಿಗಾಲಿನಲ್ಲಿದ್ದುದರಿಂದ ತಮ್ಮ ಪಾದುಕೆಯನ್ನು ಬೇಲಿಯ ಮೇಲಿಟ್ಟು ಅದನ್ನು ತುಳಿದು ಬರುವಂತೆ ತಿಳಿಸಿದಾಗ. ಹೊರಬೇಕಾದ ಗುರುಗಳ ಪಾದುಕೆಯನ್ನು ಶಿಷ್ಯರು ತುಳಿಯಲು ಸಿದ್ಧರಿರಲಿಲ್ಲ. “ನೀನಾದರೂ ಬರುತ್ತೀಯಾ?” ಎಂಬಂತೆ ಗುರುಗಳು ಶರೀಫನ ಕಡೆಗೆ ನೋಡುತ್ತಾರೆ. ಯಾವುದೇ ಮುಜುಗರವಿಲ್ಲದೆ ಪಾದುಕೆಯನ್ನು ಮೆಟ್ಟಿಕೊಂಡು ಗುರುಗಳ ಕಡೆಗೆ ಹೋಗುತ್ತಾನೆ. ಗುರುಗಳೊಂದಿಗೆ ಶರೀಫ ಮಾತ್ರ ದೇವಿಯ ದರ್ಶನವನ್ನು ಪಡೆಯಲು ಸಾಧ್ಯವಾಯಿತು. ತತ್ತ್ವಗಳಿಗೆ ಅತಿಯಾದ ಬೆಲೆಯನ್ನು ಕೊಡುತ್ತಿದ್ದ ಶರೀಫ ಜಾತಿ ಮತಗಳ ಹೊರಾವರಣವನ್ನು ತಿರಸ್ಕರಿಸಿ, ಶಾಶ್ವತ ಮೌಲ್ಯಗಳನ್ನು ಮಾತ್ರ ಗೌರವಿಸುತ್ತಿದ್ದನು.

ಒಮ್ಮೆ ಗುರುಶಿಷ್ಯರು ಒಟ್ಟಿಗೆ ಹೋಗುತ್ತಿದ್ದಾಗ ದಾರಿಯಲ್ಲಿ ಬಂಗಾರದ ಒಂದು ಕಡಗ ಬಿದ್ದಿರುವುದನ್ನು ಗುರುಗಳು ಕಾಣುತ್ತಾರೆ. ಶರೀಫ ಅದನ್ನು ಇನ್ನೂ ಕಂಡಿರುವುದಿಲ್ಲ. ಬಾಲಕನ ಮನಸ್ಸು ಕಡಗಕ್ಕೆ ಒಲಿಯದಿರಲಿ ಎಂದು ಭಾವಿಸಿದ ಗುರುಗಳು ದೂರದ ಎಕ್ಕದ ಗಿಡದಿಂದ ನಾಲ್ಕು ಎಲೆಗಳನ್ನು ಕಿತ್ತು ತರಲು ಕಳುಹಿಸುತ್ತಾರೆ. ಶರೀಫನಿಗೆ ಕಾಣಿಸದಂತೆ ಆ ಕಡಗವನ್ನು ತಗ್ಗಿಗೆ ದೂಡಿ ಅದರ ಮೇಲೆ ಕಲ್ಲು, ಮಣ್ಣನ್ನು ಸೇರಿಸುತ್ತಾರೆ. ಎಲೆ ತೆಗೆದುಕೊಂಡು ಬಂದ ಶರೀಫ ಮಣ್ಣುಗುಪ್ಪೆಯ ಮೇಲೆ ಗಕ್ಕನೆ ವಾಂತಿ ಮಾಡುತ್ತಾನೆ. ‘ಯಾಕೋ ಶರೀಫ ಆ ರೀತಿ ವಾಂತಿ ಮಾಡಿಕೊಂಡೆ ಎಂದು ಗುರುಗಳು ಕೇಳಿದಾಗ “ ಸ್ವಾಮೀ ನಾನು ಹೊನ್ನಿಗೆ ಮನಸ್ಸು ಬಿಟ್ಟೆನೆಂದು ಹೆದರಿ ಕಾಪಾಡಲು ನೋಡಿದಿರಿ. ನಿಮ್ಮ ಕರುಣೆ ದೊಡ್ಡದು. ನನಗೆ ಆ ಭಯವಿಲ್ಲ. ಆದರೆ ನಿಮ್ಮ ಇತರ ಶಿಷ್ಯರು ಈ ದಾರಿಯಲ್ಲಿ ಬರಲಿದ್ದಾರೆ. ಅವರು ಕುತೂಹಲಕ್ಕೆ ಗುಪ್ಪೆ ಕೆದಕಿಯಾರು. ಹೊನ್ನು ಅವರ ಎದೆಗೆಡಿಸಿತು. ಅದರ ತಂಟೆಗೆ ಹೋಗದಿರಲಿ ಅಂತ ಗುಪ್ಪೆಯ ಮೇಲೆ ವಾಂತಿ ಮಾಡಿಕೊಂಡೆ ಎಂದನು. ಆಗ ಗುರುಗಳು ನಗುತ್ತ “ಬಯಸಿ ತಿಂದ ಅನ್ನವೆಲ್ಲ ಹೊರಗೆ ಹೋಯಿತಲ್ಲೋ” ಎಂದರು. “ಅದು ಅನ್ನವಲ್ಲ ಒಳಗಿದ್ದ ಮೋಹ ಮಾಯೆಗಳ ಕಶ್ಮಲ. ನಿಮ್ಮ ಅನುಗ್ರಹದಿಂದ ಅದು ಕಳೆಯಿತು” ಎಂಬುದಾಗಿ ಶರೀಫ ವೇದಾಂತಿಯಂತೆ ಉತ್ತರಿಸಿ ಮುನ್ನಡೆಯುತ್ತಾನೆ.

ಗುರುವಿನ ಎಚ್ಚರ, ಶಿಷ್ಯನ ಸಾಮರ್ಥ್ಯ ಎರಡನ್ನೂ ಒಟ್ಟಗೆ ಹೇಳುವ ಕತೆಯಿದು. ಶಿಷ್ಯನನ್ನು ಮೇಲೆತ್ತಲು ತಮ್ಮ ಸಹಾಯದಗತ್ಯವಿದೆಯೇನೋ ಎಂದು ಗುರುಗಳು ಭಾವಿಸಿದರೆ ಶಿಷ್ಯ ತಾನಾಗಿಯೇ ಮೇಲಿನ ಮೆಟ್ಟಿಲಿಗೆ ಏರಿ ಗುರುಗಳನ್ನೂ ಚಕಿತಗೊಳಿಸುತ್ತಾನೆ. ಗುರುವಿನ ಎಣಿಕೆಯನ್ನು ಮೀರಿ ಶಿಷ್ಯನು ಅದಕ್ಕಿಂತಲೂ ಮೇಲಕ್ಕೇರಿರುವ ಅಂಶಗಳನ್ನು ನಾವಿಲ್ಲಿ ಗಮನಿಸಬಹುದು.

ಬ್ರಾಹ್ಮಣ ಗುರುವಿನ ಆರಾಧಕರಾದ ಶರೀಫರಿಗೆ ಮುಸ್ಲಿಂ ಸಮುದಾಯದಲ್ಲಿ ಬಹಳಷ್ಟು ವಿರೋಧವಿತ್ತು. ಬ್ರಾಹ್ಮಣನೊಂದಿಗೆ ಸುತ್ತಾಡುತ್ತಾನೆ, ನಮಾಜು, ಮಸೀದಿ ಎಂದರೇನೆಂದು ಗೊತ್ತಿಲ್ಲ ಎಂಬ ತಕರಾರುಗಳು ಸಹಜವಾಗಿದ್ದವು. ಬ್ರಾಹ್ಮಣ ಗುರುವನ್ನು ಕಟ್ಟಿಕೊಂಡ ಮೇಲೆ, ನಮಾಜನ್ನೇ ಮರೆತಿದ್ದಾನೆಂಬ ಮುಸ್ಲಿಮರ ಆಕ್ಷೇಪಗಳಿಗೆ ಶರೀಫ ಬೆಲೆಯನ್ನೇ ಕೊಡುತ್ತಿರಲಿಲ್ಲ. ಗೋವಿಂದ ಗುರುವನ್ನು ಕಟ್ಟಿಕೊಂಡ ಮೇಲೆ ನಮಾಜನ್ನು ಮರೆತಿಲ್ಲ ಅರಿತಿದ್ದಾನೆ ಎನ್ನುತ್ತಿದ್ದರಂತೆ. ‘ನಾ’ ಎನ್ನುವುದು ಮಾಸಿದಾಗ ನಡೆಯುವ ಪ್ರತಿಯೊಂದು ಕ್ರಿಯೆಯೂ ನಮಾಜು ಎಂಬುದನ್ನು ತಿಳಿದುಕೊಂಡವರು ಶರೀಫರು. ಅಹಂಕಾರ, ಮಮಕಾರ, ಆತ್ಮಘಾತಕ, ದುಷ್ಟ ವಿಚಾರಗಳನ್ನು ಬಿಟ್ಟು, ಅಲ್ಲಾ–ಅಲ್ಲಮರನ್ನು, ರಾಮ ರಹೀಮರನ್ನು ಎದುರಿಗಿಟ್ಟುಕೊಂಡು, ತ್ರಿಕರಣಪೂರ್ವವಾಗಿ ಶ್ರದ್ಧೆಯಿಂದ ಮಾಡುವ ಪೂಜೆಯೆಲ್ಲವೂ ಶಿವಪೂಜೆ, ನಮಾಜು ಇದು ಶರೀಫರ ಆಶಯವಾಗಿತ್ತು. ಒಳಗೆ ಸ್ವಚ್ಚವಾಗಿ ಮಾಡುವ ಕ್ರಿಯೆಗಳನ್ನೆಲ್ಲಾ ಅಲ್ಲಾ–ಅಲ್ಲಮ ಮೆಚ್ಚುತ್ತಾನೆಂದು ಶರೀಫರು ಬಲವಾಗಿ ನಂಬಿದ್ದರು. ಮಸೀದಿ, ಪ್ರಾರ್ಥನೆಗಳಿಗೆ ಶರೀಫರು ಹೋಗದಿರುವುದನ್ನು ಕಂಡ ಮುಲ್ಲಾಗಳು, ಖಾಜಿಗಳು ಇವರನ್ನು ಉಗ್ರವಾಗಿ ವಿರೋಧಿಸುತ್ತಾರೆ. ಶರೀಫರು ತಮ್ಮ ಮೈಯೇ ನಿಜವಾದ ಮಸೀದಿ, ಮೈ ಎನ್ನುವ ಮಸೀದಿಯಲ್ಲಿ ‘ಅರುಹು’ ಎನ್ನು ಅಲ್ಲಾ ಮಲಗಿಕೊಂಡಿದ್ದಾನೆ. ಆ ಅಲ್ಲಾನನ್ನು ಅಲ್ಲಮನನ್ನು ಮುಹಮ್ಮದ, ಮಹದೇವನಲ್ಲಿ ಕಾಣಲು ಬಯಸುತ್ತಾರೆ. ಇಸ್ಲಾಂ ಧರ್ಮ, ಅದರ ಸಹಜ ಸ್ವರೂಪ, ದೇವರ ಅಸ್ತಿತ್ವ, ಆರಾಧನೆ ಆದರ್ಶಗಳನ್ನು ಸ್ವತಃ ಅರಿತ ಶರೀಫರು ಮುಲ್ಲಾಗಳಿಗೆ ಸಮಸ್ಯೆಯಾಗುತ್ತಾರೆ. ಇಸ್ಲಾಮಿನಲ್ಲಿ ಮೂರ್ತಿಪೂಜೆ ನಿಷೇಧವಿರುವಾಗ, ಮುಲ್ಲಾಗಳು ಹೇಳುವ ಮಸೀದಿ ಅಥವಾ ತೋರಿಕೆಯ ದೇವರ ಭಕ್ತಿಗೆ ಬೆಲೆಯಾದರೂ ಏನೆಂಬ ಸಂಶಯ ಶರೀಫರಿಗೆ. ಒಟ್ಟಿನಲ್ಲಿ ಮಡಿವಂತ ಹಿಂದೂಗಳಿಗೆ ಹಾಗೂ ಮೂಲಭೂತವಾದಿ ಮುಸ್ಲಿಮರಿಗೆ ಗೋವಿಂದ ಭಟ್ಟರು ಹಾಗೂ ಶರೀಫರು ನುಂಗಲಾರದ ತುತ್ತಾಗಿದ್ದರು.

ಪ್ರಾಯಕ್ಕೆ ಬಂದ ಶರೀಫರಿಗೆ ಕುಂದಗೋಳದ ‘ಫಾತಿಮಾ’ ಎಂಬ ಹೆಣ್ಣನ್ನು ಮದುವೆ ಮಾಡುತ್ತಾರೆ. ಕಾರಡಗಿ ಊರಿನ ಶಾಲೆಯೊಂದರಲ್ಲಿ ಶಿಕ್ಷಕ ಕೆಲಸವೂ ದೊರಕಿತು. ವೃತ್ತಿ ಹಾಗೂ

ದಾಂಪತ್ಯಕ್ಕೆ ವಿಮುಖರಾಗಿ ಶರೀಫರು ಏನೇನೋ ವಿಚಾರಗಳ ಗುಂಗಿನಲ್ಲಿ ನಿರತರಾಗುತ್ತಿದ್ದರು. ಶರೀಫರು ಕಾಲಕ್ರಮೇಣ ಏಕಮಾತ್ರ ಹೆಣ್ಣುಮಗು ಹಾಗೂ ಹೆಂಡತಿಯನ್ನು ಕಳೆದುಕೊಂಡು 'ಮೋಹದ ಹೆಂಡತಿ ಸತ್ತ ಬಳಿಕ ಮಾವನ ಮನೆಯ ಹಂಗಿನ್ಯಾಕೋ' ಎಂದು ಹಾಡುತ್ತಾರೆ. ಶಿಕ್ಷಕ ವೃತ್ತಿಯನ್ನು ಬಿಟ್ಟು ಸುತ್ತಲ ಗ್ರಾಮಗಳಲ್ಲಿ ತಿರುಗುತ್ತಾ ಜನರಿಗೆ ಸರಳ ಆಸ್ತಿಕ ಜೀವನದ ಬಗ್ಗೆ ಬೋಧಿಸುತ್ತ, ಪರಂಪರೆಯ ಸಾರವನ್ನು ತಮ್ಮ ಪದಗಳಲ್ಲಿ ತೋಡಿಕೊಳ್ಳುತ್ತ ತಮ್ಮ ಕಾಲದ ಹಿರಿಯ ವೀರಶೈವ ಸಂತರ ಸಹವಾಸದಲ್ಲಿ ಸಂತೋಷದಿಂದ ಕಾಲ ಕಳೆಯತೊಡಗಿದರು. ಬಡತನ ಶರೀಫರ ಬೆನ್ನು ಬಿಡಲಿಲ್ಲ. ಜೀವನದ ಎಲ್ಲಾ ಏರಿಳಿತಗಳಲ್ಲಿಯೂ ಗೋವಿಂದ ಭಟ್ಟರ ಸಂಬಂಧ ಪಕ್ವಗೊಳ್ಳುತ್ತಾ ಹೋಯಿತು.

ಒಮ್ಮೆ ಗೋವಿಂದಭಟ್ಟರು ಊರಿನ ಮೇಲ್ಜಾತಿಯವರೊಂದಿಗೆ ಊರಿನ ಅರಳಿಕಟ್ಟೆಯಲ್ಲಿ ಕುಳಿತಿರುವಾಗ ದೂರದಲ್ಲಿ ಬರುತ್ತಿದ್ದ ಶರೀಫನನ್ನು ಕಂಡು ಉತ್ಸಾಹದಿಂದ ತಮ್ಮ ಕಡೆಗೆ ಬರಮಾಡಿಕೊಂಡು, ಪಕ್ಕದಲ್ಲಿ ಕೂರಿಸಿಕೊಂಡು, ಪ್ರೀತಿಯಿಂದ ಮೈ ಸವರುತ್ತಾ ಮಾತನಾಡಲು ಶುರು ಮಾಡಿದರು. ಅಲ್ಲಿದ್ದ ಮಡಿ ಬ್ರಾಹಣರಿಗೆ ಆಶ್ಚರ್ಯವಾಯಿತು ಹಾಗೂ ಸಾಬರ ಹುಡುಗನನ್ನು ಈ ರೀತಿ ಸಂತೈಸುವುದು ಅವರಿಗೆ ಸರಿಬೀಳಲಿಲ್ಲ. ಸಾಬರ ಹುಡುಗ ಬ್ರಾಹ್ಮಣರಂತೆ ಕಾಣುತ್ತಿರಬೇಕು ಎಂದು ಚುಚ್ಚಲು ಶುರು ಮಾಡಿದರು. ಹುಟ್ಟಿನಿಂದ ಯಾರೂ ಬ್ರಾಹ್ಮಣರಾಗುವುದಿಲ್ಲ. ಸ್ವಭಾವದಲ್ಲಿ ಯಾರೂ ಬ್ರಾಹ್ಮಣರಾಗಬಹುದು ಎಂಬುದು ಗೋವಿಂದ ಭಟ್ಟರ ನಿಲುವು. ತಮ್ಮ ಮೈಮೇಲಿದ್ದ ಜನಿವಾರದ ಮೂರು ಎಳೆಗಳನ್ನು ಶರೀಫನ ಮೈಗೆ ಹಾಕಿ ಅಪ್ಪಿಕೊಂಡುಬಿಟ್ಟರು. ನೆರೆದ ಜನರೆಲ್ಲಾ ಆಶ್ಚರ್ಯಗೊಂಡರೆ, ಭಾವಪರವಶನಾದ ಶರೀಫ, ಅವರಿಗೆ ಸಾಷ್ಟಾಂಗ ನಮಸ್ಕರಿಸುತ್ತಾನೆ. ಶರೀಫರ ಬಾಯಿಯಿಂದ ಪದವೊಂದು ಹೊರಡುತ್ತದೆ.

ಹಾಕಿದ ಜನಿವಾರವಾ ಸಗ್ಗುರುನಾಥ
ಹಾಕಿದ ಜನಿವಾರವಾ
ಹಾಕಿದ ಜನಿವಾರ
ನೂಕಿದ ಭವಭಾರ
ಬೇಕೆನುತಲೆ ಬ್ರಹ್ಮಜ್ಞಾನ ಉಚ್ಚರಿಸೆಂದೂ
ಹಾಕಿದ ಜನಿವಾರವಾ

ತಮಗೆ 'ಸಂಧ್ಯಾವಂದನೆ ಕಲಿಸಿ, ಆನಂದದಿ ಬೆಂದು ಮಧ್ಯದಿ ನೆಲಿಸಿ' ಆತ್ಮಜಲದಲ್ಲಿ ಮನಸ್ಸನ್ನು ನಿಂದಿಸಿ ಸಾವಿನಿಂದಲೇ ಬಿಡುಗಡೆ ಮಾಡಿದ ಈ ಗುರುವಿನ ಬಗೆಗೆ ಶರೀಫರಿಗೆ ಅಪಾರ ಗೌರವ. ಗುರುಗಳು ಸಾವಿರ ಜನವಿದ್ದರೂ ನಿಜವಾದ ಗುರು ಇವರು ಒಬ್ಬರೇ ಸತ್ಯಮಿತ್ಯವನ್ನು ತಿಳಿದವರು; ಪ್ರಾಮಾಣಿಕರು, ದಿಟ್ಟರು ಅಗೋಚರವಾದವುಗಳನ್ನೂ ಕಾಣಬಲ್ಲ ಋಷಿಗಳು. ಹಾಲು ಸಕ್ಕರೆಯಂತೆ ಬೆರೆತ ಗುರು ಶಿಷ್ಯರಿಬ್ಬರಿಗೂ ಊರಿನ ಮತಾಂಧರು ಬಹಿಷ್ಕಾರ ಹಾಕಿದ್ದರು. ಗುರು ಶಿಷ್ಯರಿಬ್ಬರು ಊರಿನಿಂದ ಹೊರಗಿದ್ದ ದಿನಗಳಲ್ಲಿ ಊರಿನಲ್ಲಿ ಮಳೆಯೇ ಬರಲಿಲ್ಲವಂತೆ. ಆಗ ಭಯಗೊಂಡ ಊರಿನವರು ಅವರಿಬ್ಬರಲ್ಲಿಯೂ ಕ್ಷಮೆ ಕೇಳಿ, ಗೌರವದಿಂದ ಕರೆದುಕೊಂಡು ಬಂದರೆಂಬುದು ಊರಿಡೀ ಪ್ರಚಲಿತವಾಗಿದ್ದ ಸುದ್ದಿ.

**ಶರೀಫರ ತತ್ತ್ವ ಪದಗಳು**

ಶರೀಫರ ತತ್ತ್ವಪದಗಳು ಶ್ರೇಷ್ಠ ಮಟ್ಟದವುಗಳಾಗಿದ್ದು, ನೀತಿಬೋಧೆಗಾಗಿಯೇ ರಚಿಸಿ ತರ್ಕಬದ್ಧವಾಗಿವೆ. ಸಾವಿರಾರು ವರ್ಷಗಳಿಂದ ಹರಿದು ಬಂದ ವಿಚಾರಧಾರೆಗಳನ್ನು ಆಧರಿಸಿದವು. ದೇವ, ದೈವ ಸಂಬಂಧದ ಬಗೆಗೆ, ಗುರು ಶಿಷ್ಯರ ಸಂಬಂಧದ ಬಗೆಗೆ ಆಧ್ಯಾತ್ಮಿಕ ಹಿನ್ನಲೆಯಲ್ಲಿ ರಚಿತವಾದ ತತ್ತ್ವಪದಗಳಲ್ಲಿ ಭವ್ಯವಾದ ಪರಂಪರೆಯಿದೆ. ತತ್ತ್ವಗಳನ್ನು ಮನುಷ್ಯರಿಗೆ ತಿಳಿಹೇಳುವ ಮನೆಮಾತುಗಳಿವೆ. ಈ ಹಿನ್ನಲೆಯಲ್ಲಿ ಶರೀಫರ ಕೆಲವು ತತ್ತ್ವಪದಗಳನ್ನು ಡಾ. ಮಲ್ಲಿಕಾರ್ಜುನ ಸಿಂದಗಿಯವರು ಸಂಗ್ರಹಿಸಿ ಸಂಪಾದಿಸಿದ ಶಿಶುನಾಳ ಶರೀಫರ ತತ್ತ್ವಪದಗಳು 1983 – ಈ ಕೃತಿಯ ಆಧಾರದಲ್ಲಿ ಗುರುತಿಸಲಾಗಿದೆ.

ಸ್ಥಿರವಲ್ಲೋ ಕಾಯ ಸ್ಥಿರವಲ್ಲೋ ಅ–
ಸ್ಥಿರ ಕಾಯವ ನಂಬಬ್ಯಾಡೋ
ಮರಳಿ ಮರಳಿ ಬಹು
ತೆರದಿ ಭವಕೆ ಬಂದು
ಸೊರಗಿ ಸುಖ ದುಃಖ ಎರಡರ ಮಧ್ಯದಿ
ಆತ್ಮ ವಿಚಾರವು
ಆತ್ಮದೊಳಿರುತಿರೆ
ಆತ್ಮ ಪರಮಾತ್ಮ ಪ್ರಮಾಣಿಸಿ ನೋಡದ
ಅಂದಿಂದಿಗೆ ಒಂದೇ
ತಂದೆ ಗುರುಗೋವಿಂದ
ಸುಂದರ ಶಿಶುನಾಳಧೀಶನ ಕಂದಾ

ಈ ಸಾಲುಗಳನ್ನು ಗಮನಿಸಿದಾಗ ಶರೀರವೆಂದೂ ಸ್ಥಿರವಲ್ಲ, ಅದು ಅಸ್ಥಿರ. ಹುಟ್ಟಿ ಸ್ವಲ್ಪ ಕಾಲ ಬದುಕಿ, ಮತ್ತೆ ಸತ್ತು ಹೋಗುವ ಮನುಷ್ಯ ಜನ್ಮದ ಬಗೆಗೆ ಶರೀಫರು ವಿಚಾರ ಮಾಡುತ್ತಾರೆ. ಹುಟ್ಟು ಸಾವು ಪ್ರಕೃತಿ ನಿಯಮ. ಸುಖ ದುಃಖಗಳಲ್ಲೇ ಜೀವನ ಸಾಗುತ್ತದೆ. ಜೀವಿತಾವಧಿಯಲ್ಲಿ ಪರಮಾತ್ಮನನ್ನು ಪೂಜಿಸಬೇಕೆಂಬುದು ಷರೀಫರ ಬೋಧೆ.

**ನನ್ನೊಳಗ ನಾ ತಿಳಕೊಂಡೆ**

ನನ್ನೊಳಗ ನಾ ತಿಳಕೊಂಡೆ । ನನಗ ।
ಬೇಕಾದ ಗಂಡನ್ನ ಮಾಡಿಕೊಂಡೆ ॥ ಪಲ್ಲ ॥
ಆಜ್ಞಾ ಪ್ರಕಾರ ನಡಕೊಂಡೆ ನಾ
ಎಲ್ಲಾರ ಹಂಗೊಂದು ಹರಕೊಂಡೇ ॥ ಅನುಪಲ್ಲ ॥
ಆರು ಮಕ್ಕಳನು ಅಡವಿಗಿಟ್ಟೆ
ಮೂರು ಮಕ್ಕಳನು ಬೆಡಗೊಟ್ಟೆ
ಇವನ ಮೇಲೆ ನಾ ಮನಸಿಟ್ಟೆ । ನನ್ನ ।
ಬದುಕು ಬಾಳ್ವೆನ್ನೆಲ್ಲಾ ಬೆಡೆಗೊಟ್ಟೆ
ಒಂದನಾಡಿದರೆ ಕಡಿಮೆಯೆಂದ
ಮತ್ತೆರಡನಾಡಿದರೆ ಹೆಚ್ಚೆಂದ
ಬೆಡಗಿನ ಮಾತಿದು ನಿಜವೆಂದೆ । ಇದು ।
ಸುಜ್ಞಾನಿಗಳಿಗೆ ತಿಳಿವುದೆಂದೇ
ಶಿವ ಶಿವಾ ಎಂಬ ಹಾದಿ ಬೇಡಿಕೊಂಡೇ ಈ
ಭವಕ್ಕೆ ಬಾರದಂಗ ಮಾಡಿಕೊಂಡೆ
ಗುರು ಉಪದೇಶ ಪಡಕೊಂಡೆ ನಾ
ಗುರು ಗೋವಿಂದನ ಪಾದ ಹಿಡಕೊಂಡೆ

ಅರಿವು ಮಾರುಕಟ್ಟೆಯಲ್ಲಿ ಸಿಗುವಂತಹುದಲ್ಲ. ತಾನಾಗಿಯೇ ಮೈಗೂಡುವಂತಹುದು. ಅದಕ್ಕಾಗಿ ಗುರುವಿನ ಅಗತ್ಯವಿದೆ. ಶರೀಫರ ಮೇಲೆ ಗುರುವಿನ ಪ್ರಭಾವ ದಟ್ಟವಾಗಿದೆ. ಕಾಮ, ಕ್ರೋಧ, ಮದ, ಮತ್ಸರ, ಲೋಭ ಮತ್ತು ಮೋಹಗಳೆಂಬ ಅರಿಷಡ್ವೈರಿಗಳಿಂದಲೂ, ಹೊನ್ನು, ಹೆಣ್ಣು, ಮಣ್ಣುಗಳ ಮೇಲಿನ ಆಸೆಯಿಂದಲೂ ಶರೀಫರು

ದೂರ ಉಳಿದರು. ಪ್ರಾಪಂಚಿಕ ಸುಖದಿಂದ ದೂರ ಉಳಿದ ಶರೀಫರಿಗೆ ಗುರುವಿನ ಪಾದವೇ ಸುಖ ಸಂತಸದ ಆಗರವಾಯಿತು. ಕ್ಷಣಿಕ ಸುಖವನ್ನು ತೊರೆದು ಶಾಶ್ವತ ಸುಖದತ್ತ ದೃಢಚಿತ್ತದಿಂದ ಸಾಗಬೇಕೆಂಬುದು ಶರೀಫರ ಆಶಯ.

**ಸೋರುತಿಹುದು ಮನೆಯ ಮಾಳಿಗಿ**

ಸೋರುತಿಹುದು ಮನೆಯ ಮಾಳಿಗಿ, ಮನೆ ಗಾಳಿಗೆ ನೆನೆನೆನೆದು
ಸೋರುತಿಹುದು ಮನೆಯ ಮಾಳಿಗಿ
ಸೋರುತಿಹುದು ಮನೆಯ ಮಾಳಿಗಿ
ದಾರುಗಟ್ಟಿ ಮಾಳ್ವರಿಲ್ಲೆ
ಕಾಳಕತ್ತಲೆಯೊಳಗೆ ನಾನು
ಮೇಲಕೇರಿ ಮೆತ್ತಲಾರದೆ – ಸೋರುತಿಹುದು
ಮುರುಕು ತೊಲೆಯು ಹುಳಕ ಜಂತಿ
ಕೊರೆದು ಸರಿದು ಕೀಲ ಸಡಲಿ
ಹರಕ ಚಪ್ಪರ ಜೇರಗಿಂಡಿ
ಮರೆತು ನಾನು ಮೆತ್ತಲಾರದೆ – ಸೋರುತಿಹುದು
ಕರಿಕಿ ಕಸವು ಹುಲ್ಲ ಹತ್ತಿ
ದುರಿತ ಭವದ ಇರುವಿ ಮುತ್ತಿ
ಜಲದಿ ಭರದಿ ತಿಳಿಯ ಮಣ್ಣು
ಒಳಗೆ ಹೊರಗೆ ಏಕವಾಗಿ – ಸೋರುತಿಹುದು
ಕಾಂತೆ ಕೇಳಯೇ ಕರುಣದಿಂದ
ಬಂತು ಕಾಣಿ ಹುಬ್ಬೆ ಮಳೆಯು
ಈಗ ಶಿಶುವಿನಾಲ ಗ್ರಾಮಕ
ಮೇಘರಾಜ ಇಳಿದ ಮೇಲೆ – ಸೋರುತಿಹುದು

ಮಣ್ಣಿನ ಮನೆ ಮಳೆಗಾಲದಲ್ಲಿ ಸೋರುವುದು ಸಹಜ. ಮನೆಯ ಮಾಳಿಗೆಯನ್ನು ಸರಿಯಾಗಿ ನೋಡಿಕೊಂಡರೆ ಸೋರುವುದನ್ನು ತಪ್ಪಿಸಬಹುದು. ಮನುಷ್ಯನ ದೇಹ ಕೂಡ ತೊಗಲ ಮಾಂಸದ ಮನೆ. ಇಲ್ಲಿ ಆತ್ಮವು ವಾಸ ಮಾಡಿಕೊಳ್ಳುತ್ತದೆ. ರಕ್ತ ಮಾಂಸದ ಮನೆಯಲ್ಲಿ ಆಸೆ ಆಕಾಂಕ್ಷೆಗಳು ಸೇರಿಕೊಂಡಾಗ ಆ ದೇಹವು ಬಿದ್ದು ಹೋಗುವ ಸಾಧ್ಯತೆಯಿದೆ. ಐಹಿಕ ಸುಖಕ್ಕಾಗಿ ಇಷ್ಟಪಡುವ ಮನುಷ್ಯರು ಪಾರಮಾರ್ಥಿಕವನ್ನು ಮರೆತುಬಿಡುತ್ತಾರೆ. ದೇಹವೆಂಬ ಮನೆಯ ಬಗೆಗೆ ಶರೀಫರು ಬಹಳ ಎಚ್ಚರಿಕೆಯನ್ನು ವಹಿಸುತ್ತಾರೆ.

ಶರೀಫರನ್ನು ಜನ ಪವಾಡ ಪುರುಷರೆಂದು ಜನ ನಂಬಿದ್ದರೂ ಅದಕ್ಕೆ ಅವರ ಪದಗಳಲ್ಲಿ ಉದಾಹರಣೆಗಳೇನೂ ಸಿಗುವುದಿಲ್ಲ. ಶರೀಫರ ಕೊನೆಯ ದಿನಕ್ಕೆ ಮೊದಲೇ ಗೋವಿಂದ ಭಟ್ಟರು ತೀರಿಕೊಂಡಿದ್ದರು. ಶರೀಫರಿಗೆ ಸಾಯುವ ದಿನ ಮೊದಲೇ ತಿಳಿದಿತ್ತೋ ಗೊತ್ತಿಲ್ಲ. ಶರಣ ಸಂಪ್ರದಾಯದಂತೆ ವಿಭೂತಿ ವೀಳ್ಯ ಆಚರಿಸಿ ದೇಹತ್ಯಾಗ ಮಾಡಲು ಅವರು ನಿರ್ಧರಿಸಿದ್ದರು. ವಿಭೂತಿ ವೀಳ್ಯದ ಸಂಪ್ರದಾಯದಂತೆ ಜಂಗಮನನ್ನು ಪೂಜಿಸಬೇಕು. ಆತನ ಕಾಲ ಮೇಲೆ ತಲೆಯಿಟ್ಟು ಪ್ರಾಣ ಬಿಡಬೇಕು. ಆದರೆ ಶರೀಫರ ತಲೆಯನ್ನು ಕಾಲ ಮೇಲಿಟ್ಟುಕೊಳ್ಳಲು ಜಂಗಮ ಸಿಗಬೇಕಲ್ಲ? ಶರೀಫರ ಒತ್ತಾಯಕ್ಕೆ ಸೋತ ಹಿರೇಮಠದ ಕರಿಬಸವಯ್ಯನವರು ಅಂಜುತ್ತಲೇ ಅದಕ್ಕೊಪ್ಪಿದರಂತೆ. ಹಾಗೆ ಕರಿಬಸವಯ್ಯನವರ ಕಾಲ ಮೇಲೆ ತಲೆಯಿಟ್ಟು ದಿನಾಂಕ 03–07–1889 ರಂದು ತೀರಿಕೊಂಡರಂತೆ. ಅವಸಾನದ ದಿನದ ಬಗೆಗೆ ಅವರಿಗೆ ಮುಂಚಿತವಾಗಿಯೇ ಅರಿವಿತ್ತು ಎಂಬುದನ್ನು ಜನರ ಮಾತುಗಳಿಂದ ಒಪ್ಪಬಹುದಾದರೂ, ವಸ್ತುನಿಷ್ಠವಾದ ಆಧಾರಗಳು ಲಭ್ಯವಿರುವುದಿಲ್ಲ. ಶರೀಫರು ತೀರಿಕೊಂಡಾಗ ಅವರ ಅಂತ್ಯಕ್ರಿಯೆಯ ಬಗೆಗೆ ಊರ ಜನರಿಗೆ ಸಮಸ್ಯೆ ಎದುರಾಯಿತು. ಹುಟ್ಟಿದ್ದು ಮುಸ್ಲಿಂ ಜನಾಂಗದಲ್ಲಾದರೆ, ಬೆಳೆದದ್ದು ಹಿಂದೂ – ಮುಸ್ಲಿಂ ಸಮನ್ವಯ ರೀತಿಯಲ್ಲಿ. ಇವರ ಅಂತ್ಯಕ್ರಿಯೆಯು ಯಾವ ರೀತಿ ಜರುಗಬೇಕೆಂಬ ಗೊಂದಲ ಜನರಿಗುಂಟಾಯಿತು. ಎರಡೂ ಸಮುದಾಯಗಳ ಹಿರಿಯರು ಕೂಡಿಕೊಂಡು ಎರಡೂ ಧರ್ಮಗಳ ನಿಯಮಗಳನ್ನು ಸಾಧ್ಯವಾದಷ್ಟು ಪಾಲಿಸುವುದಾಗಿ ತೀರ್ಮಾನಿಸಿದರು. ಕುರಾನ್ ಪಠಣದೊಂದಿಗೆ ಮಂತ್ರಪಠಣವೂ ನಡೆಯಿತು. ಶರೀಫರು ಮೊದಲೇ ಸೂಚಿಸಿರುವಂತೆ ತಾಯ್ತಂದೆಯವರ ದಫನ ಸ್ಥಳದ ಪಕ್ಕದಲ್ಲಿಯೇ ಇವರ ದಫನ ಕಾರ್ಯವೂ ಜರುಗಿತು. ಎರಡೂ ಧರ್ಮಗಳ ಸಂಗಮವಾಗಿ ಬಾಳಿದ ಮಹಾಚೇತನವೊಂದು ಅಪೂರ್ವ ರೀತಿಯಲ್ಲಿ ಮಣ್ಣಪಾಲಾಯಿತು.

ಶಿಶುನಾಳದ ವಿಶಾಲವಾದ ಬಯಲು ಪ್ರದೇಶದಲ್ಲಿ ಶರೀಫರ ಗೋರಿಯಿದೆ. ಅಲ್ಲಿಯ ಪ್ರತಿಯೊಂದು ವಸ್ತುವಿಗೂ ಇತಿಹಾಸವಿದೆ. ತಾಯ್ತಂದೆಯರನ್ನು ಜೀವಂತ ದೇವರೆಂದು ಪೂಜಿಸುತ್ತಿದ್ದ ಶರೀಫರು ಅವರ ಗೋರಿಗಳ ಪಕ್ಕದಲ್ಲಿ ಸ್ಮಾರಕವಾಗಿ ಎರಡು ಬೇವಿನ ಮರಗಳನ್ನು ನೆಟ್ಟಿದ್ದರಂತೆ. ಅವುಗಳು ವಿಶಾಲವಾಗಿ ಬೆಳೆದು ಇಡೀ ಅಂಗಗಳನ್ನು ವ್ಯಾಪಿಸಿದೆ. ಅದರಿಂದಾಗಿ ಬಹಳಷ್ಟು ಮಂದಿ ಯಾತ್ರಾರ್ಥಿಗಳು ನೆರಳನ್ನು ಪಡೆಯುತ್ತಾರೆ. ಅದನ್ನು ಆಶ್ರಯಿಸಿರುವ ಮಲ್ಲಿಗೆ ಬಳ್ಳಿ ಪರಿಮಳವನ್ನೀಯುತ್ತದೆ. ಶರೀಫರ ಗೋರಿಗೆ ಎಲ್ಲಾ ಮತಧರ್ಮದವರು ಗೌರವ ಸಲ್ಲಿಸುತ್ತಾರೆ. ಎಡಭಾಗದಲ್ಲಿ ಮುಸ್ಲಿಮರು ನಮಾಜು ಮಾಡುತ್ತಾ ಕುರಾನ್ ಓದುತ್ತಾ ಸಕ್ಕರೆ ಸಿಹಿ ಹಂಚುತ್ತಾರೆ. ಬಲಭಾಗದಲ್ಲಿ ಹಿಂದೂಗಳು ಹಣ್ಣು ಕಾಯಿ ಹೂಗಳನ್ನು ಅರ್ಪಿಸುತ್ತಾರೆ. ಅಮವಾಸ್ಯೆ, ಶ್ರಾವಣ ಸೋಮವಾರ ಹಾಗೂ ಶರೀಫರ ಜಾತ್ರೆಗಳಲ್ಲಿ ಮತಭೇದವಿಲ್ಲದೆ ಜನರು ಗೌರವ ಸಲ್ಲಿಸುತ್ತಾರೆ. ದಿನದ ಐದು ಸಲದ ನಮಾಜು ಕ್ರಮಪ್ರಕಾರವಾಗಿ ನಡೆಯುತ್ತದೆ. ಯಾವುದೇ ಸದ್ದುಗದ್ದಲವಿಲ್ಲದೆ, ಕಾರ್ಯವಿಧಿಗಳು ಗೌರವಪೂರ್ಣವಾಗಿ ಜರುಗುತ್ತದೆ.

ವರಕವಿಯಾಗಿದ್ದ ಶರೀಫರು ಆತ್ಮಜ್ಞಾನಿಯಾಗಿ, ಮಾನವ ಪ್ರೇಮಿಯಾಗಿ, ಶಿಕ್ಷಣವೇತ್ತರಾಗಿ ಅಪಾರ ಅನುಭವ ಗಳಿಸಿ ಬದುಕಿದವರು. ಜನರ ನಾಡಿಬಡಿತಗಳನ್ನು ಆತ್ಮೀಯವಾಗಿ ಅರಿತುಕೊಂಡಿದ್ದ ಅವರು ತಮ್ಮ ಜಾನಪದೀಯ ಶೈಲಿಯ ಮೂಲಕ ಅವುಗಳನ್ನು ಸಮಾಜಕ್ಕೆ ತೆರೆದಿಟ್ಟರು. ತತ್ತ್ವಪದಗಳು ಸರ್ವಕಾಲಿಕ ಮೌಲ್ಯಗಳನ್ನು ಪಡೆದುಕೊಂಡು, ಸಮಾಜದ ಎಲ್ಲಾ ಸಮುದಾಯದ ಜನರಿಗೂ ಮೆಚ್ಚುಗೆಯಾಗಬಲ್ಲವು.

ಶಿಶುನಾಳ ಶರೀಫರ ರಚನೆಗಳು, ಆ ಕಾಲದ ಜನಜೀವನದ ಬಗೆಗೆ ಬೆಳಕನ್ನೀಯುತ್ತವೆ. ಜಾತಿ–ಮತಗಳ ಕಟ್ಟುಪಾಡುಗಳನ್ನು ದಾಟಿ ಬೆಳೆದ ಜೀವನ ಅವರದು. ಶರೀಫರು ಹಿಂದೂ–ಮುಸ್ಲಿಂ ಸಮುದಾಯಗಳ ಮಧ್ಯೆ ಸೌಹಾರ್ದತೆಯನ್ನು ಸ್ಥಾಪಿಸಲು ಪ್ರಯತ್ನಿಸಿದರು. ಅವರ ಕೃತಿಗಳ ಬಗೆಗೆ ಸಾಕಷ್ಟು ಅಧ್ಯಯನಗಳು ನಡೆಯುತ್ತಿವೆ. ಶಿಶುನಾಳ ಶರೀಫರ ಸಮಕಾಲೀನ ಮುಸ್ಲಿಂ ಮೌಖಿಕ ಕವಿಗಳ ಬಗೆಗೂ ಅಧ್ಯಯನ ನಡೆದಿದೆ.

**ಇತರರು**

ಜನಮನದೆದುರು, ಸಂತೋಷಾರ್ಥವಾಗಿ ಹಾಡಿದವರು, ಕುಣಿದು ಅಭಿನಯಿಸಿದ ಜನಪದ ಕಲಾವಿದರು ಶಿಷ್ಟ ಕಲಾವಿದರಷ್ಟು ಪ್ರಸಿದ್ಧರಲ್ಲ. ಇವರಿಗೆ ರಾಜಾಶ್ರಯ ದೊರೆಯದೆ ಎಲೆಮರೆಯ ಕಾಯಿಗಳಂತೆ ಬದುಕಿದವರು. ಅವರ ರಚನೆಗಳ ಬಗೆಗೆ ಲಿಖಿತ ಆಧಾರಗಳು ದೊರಕುವುದು ವಿರಳ. ಮಲ್ಲಿಕಾರ್ಜುನ ಶಿ. ಲಠ್ಠೆಯವರು ಪರಿಶ್ರಮದಿಂದ ಸಂಶೋಧನೆ ಮಾಡಿ 1979ರಲ್ಲಿ ಜನಪದ ಕವಿ ಚರಿತೆ ಭಾಗ – 1 ಎಂಬ ಗ್ರಂಥವನ್ನು ಪ್ರಕಟಿಸಿದ್ದಾರೆ. ಇದರಲ್ಲಿ ಜನಪದ ಕವಿಗಳ ಹೆಸರು, ಕಾಲ, ಸ್ಥಳ, ಮತ,

ಉದ್ಯೋಗ, ಸಾಹಿತ್ಯ ರಚನೆ ಮುಂತಾದ ಹಲವಾರು ಮಾಹಿತಿಗಳ ವಿವರಗಳಿವೆ. ಇದರಿಂದಾಗಿ ಸುಮಾರು 26 ಮಂದಿ ಜನಪದ ಕವಿಗಳ ಹೆಸರು ಮತ್ತು ಕಾಲವನ್ನು ದಾಖಲಿಸಲು ಸಾಧ್ಯವಾಗಿದೆ.

1. ಸಂಗೊಳ್ಳಿಯ ಮೋದಿ ಸಾಹೇಬ(1780–1890)
2. ಲಾಡಂತಿಯ 'ಲಾಡಮದನಸಾ'(1810 – 1890)
3. ಅರವಲ ಬಿಜಿಲೆ (1830 – 1900)
4. ಹಲಸಂಹಿಯ ಖಾಜಾಭಾಯಿ(1847 – 1907)
5. ಮಾರನ ಬಸರಿ ಮೋಹದಿನ ಸಾ (1850 – 1950)
6. ಮೋಟಹಳ್ಳಿಯ ಹಸನ್ ಸಾಹೇಬ (1856 – 1916)
7. ಮೊರಬರ ಕಮಾಲಸಾಹೇಬ (1857 – 1927)
8. ಬೀಬಿ ಇಂಗಳಿಯ ಹಸನ್ ಸಾಹೇಬ (1858 – 1918)
9. ಮಂಗಲಗಿ ನನ್ನಾ ಸಾಬ (1874 – 1947)
10. ನರೋಣಾದ ಹೈದರಲಿ (1877 – 1937)
11. ಕಾಳಗಿ ಮಶಾಕ ಸಾಬ (1887 – 1947)
12. ಸಿರಗುರದ ಇಂದಲಬೇಗ (1877 – 1937)
13. ಕಾಖಗಿ ಮಶಾಕ ಸಾಬ (1874)
14. ಕೊಳ್ಳೂರ ಹುಸನಾ ಸಾಹೇಬ (1900 – 1964)
15. ಮಾಲಿಂಗಪುರದ ಮಲಿಕಾ ಸಾಹೇಬ (1912)
16. ರಾಣಿಬೆನ್ನೂರಿನ ಸಮ್ಮದ ಸಾಹೇಬ (1899)
17. ದೇಸಾಯಿ ಹಜರತ್ ಸಾಹೇಬ (1903)
18. ಹನಗಂಡಿಯ ಖುದಾಕ್ಷ (1904 – 1964)
19. ಚಾಂದಕೊಟೆ ಗುಡುಲಾಲ (1906 – 1957)
20. ಸಾವಳಗಿಯ ಮಹಮ್ಮದ (1906)
21. ಮಹಾಗಾಂವದ ಮೀರಾ ಸಾಹೈಬ (1917)
22. ಪರಮಾನಂದವಾಡಿ ಮೀರಾ ಸಾಹೇಬ (1922)
23. ಇಂಗಲೇಶ್ವರದ ಲಾಲ ಸಾಬ(1922)
24. ಬಸವನ ಗಾಗೇವಾಡಿಯ ಪಟೇಲ (1926)
25. ಹುಲಗಬಾಳಿ ಹಸನಸಾಹೇಬ (1927)
26. ಭೈರಾಮಡಗಿ ಹೈದರ ಸಾಹೇಬ (1934)

ಈ ಮೇಲಿನ ಇಪ್ಪತಾರು ಮುಸ್ಲಿಂ ಜನಪದ ಕವಿಗಳ ಬಗೆಗೆ ಹೆಚ್ಚಿನ ಮಾಹಿತಿಗಳು ಲಭ್ಯವಿಲ್ಲ. ಇವರ ಬಗೆಗೆ ಡಾ. ಮಲ್ಲಿಕಾರ್ಜುನ ಶಿ. ಲಠ್ಠೆಯವರು ಈ ಕೆಳಗಿನಂತೆ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ಜನಪದ ಹಾಡುಗಳು ಬಾಯಿಂದ ಬಾಯಿಗೆ, ತವರು ಮನೆಯಿಂದ ಗಂಡನ ಮನೆಗೆ, ಗಂಡನ ಮನೆಯಿಂದ ತವರು ಮನೆಗೆ, ಅಲ್ಲಿಂದ ಇಲ್ಲಿ, ಇಲ್ಲಿಂದ ಅಲ್ಲಿ ಹೀಗೆ ಸಂಚರಿಸುತ್ತಿರುವುದರಿಂದ ಅವುಗಳನ್ನು ರಚಿಸಿದ ಕವಿಗಳ ವಿಷಯದಲ್ಲಿ ಅಜ್ಞತೆ ಉಂಟಾಗಿರಬೇಕು. ಕವಿಗೆ ತಾನೊಬ್ಬ ಸಾಹಿತಿ, ಕವಿ ಎನ್ನುವ ಅಹಮ್ಮಿಕೆ ಇಲ್ಲದಿರುವುದೂ ಒಂದು ಕಾರಣವಾಗಿರಬೇಕು. ಕಾವ್ಯ ಕಟ್ಟುವ ಶಕ್ತಿ ಗುರುವಿನ ಇಲ್ಲವೇ ಆರಾಧ್ಯ ದೇವತೆಯಿಂದ ಬಂದುದೆಂದೂ ಹಾಡಿನ ಕೊನೆಗೆ ತನ್ನ ಗುರುವಿನ ಇಲ್ಲವೇ ದೇವತೆಯ ಹೆಸರನ್ನು ಮುದ್ರಿಕೆಯಾಗಿ ಹಾಕುತ್ತಾ ಬಂದಿರಬೇಕು. ಈ ಮುದ್ರಿಕೆಗಳನ್ನು ಬೇರೆ ಬೇರೆ ಊರಿನಲ್ಲಿ ಹಾಡುವವರು ಕೈಬಿಟ್ಟು ಬೇರೆ ಬೇರೆ ಮುದ್ರಿಕೆಗಳನ್ನು ಹಾಕಿಕೊಂಡು ಹಾಡುವ ದುರಭ್ಯಾಸವಿದ್ದುದರಿಂದ ಜನಪದ ಕವಿಗಳು ಅಜ್ಞಾತರಾಗಿ ಹೋಗಿರಬೇಕು.

ಅನಕ್ಷರಸ್ಥ ಕವಿಗಳು ತಮ್ಮ ಸಂತೋಷಕ್ಕಾಗಿ, ಹಬ್ಬ ಹರಿದಿನಗಳಲ್ಲಿ, ಮದುವೆ, ಮುಂಜಿ, ತಿಥಿ ಮೊದಲಾದ ಸಂದರ್ಭಗಳಲ್ಲಿ ಹಾಡುತ್ತಿದ್ದ ರಚನೆಗಳು, ಲಿಖಿತ ದಾಖಲೆಗೊಳಪಡಲಿಲ್ಲ. ಆದ್ದರಿಂದ ಒಬ್ಬ ಕವಿಯ ಜೀವಿತ ಕಾಲದವರೆಗೆ ಮಾತ್ರ ಆತನ ರಚನೆಗಳು ಲಭ್ಯವಿರುತ್ತವೆ. ಕ್ರಮೇಣ ಅವುಗಳು ನಾಪತ್ತೆಯಾಗಬಹುದು ಅಥವಾ ಬೇರೊಬ್ಬನ ಹೆಸರಿನೊಂದಿಗೆ ಸೇರ್ಪಡೆಯಾಗಬಹುದು. ಹಾಗೆಯೇ ಹದಿನೆಂಟನೆಯ ಶತಮಾನದ ಕೊನೆಯ ಭಾಗ, ಹತ್ತೊಂಬತ್ತನೆಯ ಶತಮಾನವಿಡೀ ಮತ್ತು ಇಪ್ಪತ್ತನೆಯ ಶತಮಾನದ ಆದಿಭಾಗದಲ್ಲಿ ಉತ್ತರ ಕರ್ನಾಟಕದಲ್ಲಿ ಆಗಿಹೋದ ಜನಪದ ಕವಿಗಳ ಬಗೆಗೆ ವಿವರವಾದ ಮಾಹಿತಿಗಳು ಲಭ್ಯವಿರುವುದಿಲ್ಲ.

ಜನಪದ ಕವಿಗಳ ರಚನೆಗಳ ಆಧಾರದಲ್ಲಿ ನೋಡಿದರೆ ಆ ಕಾಲದಲ್ಲಿ ಇಸ್ಲಾಂ ಸಂಸ್ಕೃತಿಗೆ ಸಂಬಂಧಿಸಿದ ವಿವರಗಳು ಅಷ್ಟೇನೂ ದಾಖಲಾಗಿಲ್ಲ. ಹೆಚ್ಚಿನ ಮುಸ್ಲಿಂ ಕವಿಗಳು ಹಿಂದೂ ದೇವತೆಗಳ ಆರಾಧಕರಾಗಿದ್ದರು. ದೇವಿಯ ಉಪಾಸಕರಾಗಿ, ಎಲ್ಲಮ್ಮನ ಉಪಾಸಕರಾಗಿ ಕೃತಿ ರಚಿಸುತ್ತಿದ್ದರು. ಹಾಗೆಯೇ ಮೊಹರಂ ಹಾಡುಗಳು, ದಪ್ಪಿನ ಹಾಡುಗಳು ಮುಂತಾದ ಮುಸ್ಲಿಂ ಸಂದರ್ಭಗಳ ಬಗೆಗೆ ಹೇಳಿಕೆಗಳು ಕೇಳಿ ಬಂದರೂ, ಸಂಬಂಧಿಸಿದ ರಚನೆಗಳ ಮಾದರಿಗಳು ಲಭ್ಯವಿರುವುದಿಲ್ಲ. ಆದ್ದರಿಂದ ಆ ಕಾಲದ ಮುಸ್ಲಿಂ ಜನಜೀವನದ ಯಾವುದೇ ದಾಖಲೆಗಳು ಈ ಜನಪದ ಕವಿಗಳ ಸಾಹಿತ್ಯದ ಸಂದರ್ಭದಲ್ಲಿ ಲಭಿಸುವುದಿಲ್ಲ. ಒಟ್ಟಿನಲ್ಲಿ ಉತ್ತರ ಕರ್ನಾಟಕದ ಮುಸ್ಲಿಂ ಕುಟುಂಬಗಳಿಂದ ಬಂದಿರುವ ಹಲವಾರು ಜನಪದ ಕವಿಗಳ ಹೆಸರುಗಳು, ಹುಟ್ಟಿದ ಕಾಲ ಮತ್ತು ಪ್ರದೇಶಗಳಿಗೆ ಮಾತ್ರ ಸೀಮಿತವಾಗಿರುವ ವಿವರಗಳು ಇಲ್ಲಿ ದಾಖಲಾಗಿವೆ.

**ಕೊನೆಯ ಟಿಪ್ಪಣಿಗಳು**

1. ಡಾ. ಮಲ್ಲಿಕಾರ್ಜುನ ಶಿ. ಲಠ್ಠೆ, ಜನಪದ ಕವಿ ಚರಿತೆ – ಸಂಪುಟ 1 : 1979
2. ಶೀಶುನಾಳ ಶರೀಫ್ ಸಾಹೇಬರ ಗೀತೆಗಳು – ಸಂಪಾದಕ : ಎನ್.ಎಸ್. ಲಕ್ಷ್ಮೀ ನಾರಾಯಣ ಭಟ್ಟ, 1985
3. ಶಿಶುನಾಳ ಶರೀಫ ಸಾಹೇಬರ ಜೀವನ ಲೀಲಾಮೃತ – ಡಾ. ಮಲ್ಲಿಕಾರ್ಜುನ ಸಿಂದಗಿ: 1990
4. ಕನ್ನಡ ಸಾಹಿತ್ಯದಲ್ಲಿ ಪ್ರತಿಬಿಂಬಿತವಾದ ಇಸ್ಲಾಂ ಸಂಸ್ಕೃತಿ – ಡಾ. ಎನ್. ಇಸ್ಮಾಯಿಲ್